ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 37 ಸೆಪ್ಟೆಂಬರ್ 19, 1982 ಬೆಲೆ 60 ಪೈಸೆ

ಅಕ್ಟೋಬರ್ ೪ :
ಶಾಂತಿ ಯಾತ್ರೆಯನ್ನು
ಯಶಸ್ವಿಗೊಳಿಸಿ

ಸರಕಾರ ಕಾರ್ಮಿಕ ವಿರೋಧೀನೀತಿಯನ್ನು ಪ್ರತಿಭಟಿಸಿ

ರಾಷ್ಟ್ರದಾದ್ಯಂತ ಯಶಸ್ವೀ ಮತಪ್ರದರ್ಶನ

ಸೆಪ್ಟೆಂಬರ್ 17 : ಇಂದು ದೆಹಲಿಯಲ್ಲಿ ನಡೆಯಲಿರುವ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಐ. ಎನ್. ಟಿ. ಯು. ಸಿ. ಹೊರತುಪಡಿಸಿ ಉಳಿದೆಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಬಹಿಷ್ಕರಿಸಿವೆ. ಸರಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ದೆಹಲಿಯಲ್ಲಿ ಸೆ. 2 ರಂದು ನಡೆದ ರಾಷ್ಟ್ರೀಯ ಆಂದೋಲನ ಸಮಿತಿ (ಎನ್. ಸಿ. ಸಿ.) ಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿತ್ತು. ಸರಕಾರದ ಕ್ರಮಕ್ಕೆ ಪ್ರತಿಭಟನೆ ಸೂಚಿಸಿ 17-9-82 ರಂದು ರಾಷ್ಟ್ರದಾದ್ಯಂತ ಎಲ್ಲೆಡೆ ಯಶಸ್ವೀ ಮತಪ್ರದರ್ಶನ ನಡೆಸಲಾಯಿತು.

ಕಾರ್ಮಿಕ ಸಂಘಟನೆಯ ಸಕ್ರೀಯ ಕಾರ್ಯಕರ್ತರ ವಿರುದ್ಧ ಎನ್.ಎಸ್.ಎ. ಮತ್ತು ಎಸ್ಮಾಗಳನ್ನು ಉಪಯೋಗಿಸುತ್ತಿರುವ ಸರಕಾರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಹತ್ತಿಕ್ಕುತ್ತಿರುವುದಲ್ಲದೇ, ಮುಷ್ಕರದ ಹಕ್ಕನ್ನೂ ಕಿತ್ತುಕೊಳ್ಳಲೆತ್ನಿಸುತ್ತಿದೆ. ತನ್ನ ಬಾಲಬಡುಕ ಸಂಘಟನೆಯಾದ ಐ.ಎನ್.ಟಿ.ಯು.ಸಿ.ಗೆ ಪ್ರಾಧಾನ್ಯತೆಯನ್ನು ಕೊಡುತ್ತಿದೆ. ಇಂಟಕ್‌ನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಎರಡೂವರೆ ಲಕ್ಷ ಮುಂಬೈ ಹತ್ತಿ ಗಿರಣಿ ಕಾರ್ಮಿಕರು ಎಂಟು ತಿಂಗಳಿಂದ ನಡೆಸುತ್ತಿರುವ ಧೀರ ಮುಷ್ಕರವನ್ನು ಇತ್ಯರ್ಥಪಡಿಸುವಲ್ಲಿ ಅನುಚಿತ ವಿಳಂಬ ಅನುಸರಿಸುತ್ತಿರುವುದು ಸರ್ಕಾರದ ಧೋರಣೆಯ ಸ್ಪಷ್ಟ ನಿದರ್ಶನವಾಗಿದೆ.

ಯಾವುದೇ ಕೇಂದ್ರ ಕಾರ್ಮಿಕ ಸಂಘಟನೆಗಳೊಡನೆ ಚರ್ಚಿಸದೇ ಕೆಲವು ಕಾರ್ಮಿಕ ವಿರೋಧಿ ಮಸೂದೆಗಳನ್ನು ಸಂಸತ್‌ನೆದರು ಸರಕಾರ ಮಂಡಿಸಲಿದೆ.

ಪತ್ರಿಕಾ ಸ್ವಾತಂತ್ರ್ಯಕ್ಕೇ ಮಾರಕವಾಗಿರುವ ಮಸೂದೆಯೊಂದನ್ನು ಬಿಹಾರ ಸರಕಾರ ಹೊರಡಿಸಿದೆ. ಈ ಕರಾಳ ಮಸೂದೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಗಂಡಾಂತರ ತರುವುದರ ಮುನ್ಸೂಚನೆಯಾಗಿದೆ.

ಈ ಹಿನ್ನೆಲೆಯಲ್ಲಿ ತ್ರೀಪಕ್ಷೀಯ ಸಮ್ಮೇಳನದಲ್ಲಿ ಪಾಲ್ಗೊಳ್ಳುವುದು ನಿರರ್ಥಕವೆಂದು ಎನ್.ಸಿ.ಸಿ. ಅಭಿಪ್ರಾಯಪಟ್ಟಿದೆ.

ಬೆಂಗಳೂರಿನಲ್ಲಿ ಸೆಪ್ಟೆಂಬರ್ 17 ರಂದು ರಾಜಭವನದೆದರು ನಡೆದ ಧರಣಾ ಕಾರ್ಯಕ್ರಮದಲ್ಲಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ರಾಜ್ಯಪಾಲರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

(ಪೂರ್ತಿ ವಿವರ ಮುಂದಿನ ವಾರ)

ಲೆಬನಾನ್‌ನಲ್ಲಿ ಹೊಸ ರಾಜಕೀಯ ಗೊಂದಲ

ಇಸ್ರೇಲ್‌ನವರ ಧಾಳಿಗೆ ಗುರಿಯಾಗಿದ್ದು ಅನೇಕ ಕಷ್ಟ ನಷ್ಟಗಳನ್ನನುಭವಿಸಿದ ಲೆಬನಾನ್ ದೇಶದಲ್ಲೀಗ ಹೊಸ ಸಮಸ್ಯೆಯೊಂದು ಉದ್ಭವಿಸಿದೆ. ಪ್ಯಾಲೆಸ್ಟೇನಿಯನ್ ವಿಮೋಚನಾ ಯೋಧರನ್ನು ಬೈರೂತ್‌ನಲ್ಲಿ ಸಂಪೂರ್ಣ ನಾಶಗೊಳಿಸಲು ಇಸ್ರೇಲ್ ಯುದ್ಧ ನಡೆಸಿ ಕೊನೆಗೆ ಪ್ಯಾಲೆಸ್ಟೇನಿಯನ್ ಯೋಧರು ಅನಿವಾರ್ಯವಾಗಿ ಅಲ್ಲಿಂದ ಹೋಗಬೇಕಾಗಿ ಬಂತು. ಇದಾದ ಕೆಲವೇ ದಿನಗಳ ನಂತರ ಲೆಬನಾನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಬಷೀರ್ ಜಮಯೆಲ್ ಅವರು ಮಂಗಳವಾರ ರಾಜಧಾನಿಯಾದ ಬೈರೂತ್‌ನಲ್ಲಿ ಬಾಂಬ್ ಸ್ಫೋಟದಲ್ಲಿ ಸಾವಿಗೀಡಾದರು. ಇದರಿಂದ ಆ ದೇಶದಲ್ಲಿ ಹೊಸ ರಾಜಕೀಯ ಬಿಕ್ಕಟ್ಟು ಉದ್ಭವಿಸಿದೆ.

ಸಂಪಾದಕೀಯ

ಬೈರೂತ್‌ನಲ್ಲಿ ಅರ್ಧಭಾಗ ಜನ ಮುಸ್ಲಿಂಮರಿದ್ದಾರೆ ಮತ್ತು ಅರ್ಧಭಾಗ ಕ್ರಿಶ್ಚಿಯನ್‌ರು ಇದ್ದಾರೆ. ಇವರೊಳಗೆ ಪರಸ್ಪರ ವಿರಸ ಸದಾ ಇದ್ದುದರ ಪರಿಣಾಮವಾಗಿ ಸಾಮ್ರಾಜ್ಯಶಾಹಿಗಳಿಗೆ ಪಿತೂರಿ ನಡೆಸಲು ಅಲ್ಲಿ ಅನುಕೂಲವಾಗಿದೆ. ಕ್ರಿಶ್ಚಿಯನ್ ಜನಾಂಗದವರಿಗೆ ಫಲಾಂಗಿಸ್ಟ್ ಪಾರ್ಟಿಯೆಂಬುದಿದೆ. ಈ ಪಾರ್ಟಿಯು ತೀವ್ರ ಪ್ರತಿಗಾಮಿಯಾಗಿರುವುದಲ್ಲದೆ ಸಾಮ್ರಾಜ್ಯಶಾಹಿಗಳೊಂದಿಗೂ ಮತ್ತು ಇಸ್ರೇಲ್ ಜೊತೆಗೂ ಸಂಬಂಧವಿಟ್ಟುಕೊಂಡಿದೆ. ಇವರು ವಾಸವಾಗಿರುವ ಪ್ರದೇಶದಲ್ಲೇ ಇಸ್ರೇಲ್ ಸೈನ್ಯವು ಲೆಬನಾನ್‌ಗೆ ಪ್ರವೇಶಮಾಡಿ ಪ್ಯಾಲೆಸ್ಟೇನಿಯನ್ ಯೋಧರ ವಿರುದ್ಧ ಹೋರಾಟ ನಡೆಸಲು ಅವಕಾಶ ಮಾಡಿತ್ತು. ಜಮಯೆಲ್‌ರವರು ಇಸ್ರೇಲ್ ಪರವಾಗಿದ್ದ ಕಾರಣ ಅವರ ಆಯ್ಕೆಯಲ್ಲಿ ಇಸ್ರೇಲ್ ಕೈವಾಡವಿತ್ತೆಂಬುದು ಸ್ಪಷ್ಟವಾಗಿತ್ತು.

(8ನೇ ಪುಟ ನೋಡಿ)

ಪ್ಯಾಲಿಸ್ಟೈನ್ ಯೋಧರ ಧೃಢ ನಿರ್ಧಾರ

"ಬಂದೂಕುಗಳನ್ನು ಎತ್ತಿಹಿಡಿಯುತ್ತೇವೆ"

ಆಗಸ್ಟ್ 21. ಬೈರೂತ್‌ನಲ್ಲಿ ಹೃದಯಸ್ಪರ್ಶಿ ದೃಶ್ಯ ಫಿರಂಗಿ ಗುಂಡುಗಳ ಸದ್ದು ಮೊಳಗುತ್ತಿತ್ತು. ಆ ನಗರದ ಜನತೆಯುಕಣ್ಣೀರಿನೊಂದಿಗೆ ಹೂಗಳನ್ನು ಹಿಡಿದು ಗೆರಿಲ್ಲಾಗಳಿಗೆ ವಿದಾಯ ಹೇಳಿದರು. ವಿದಾಯದೊಂದಿಗೆ ಹೋರಾಟ ಮುಂದುವರಿಸುವ ಧೃಡವಾದ ಪ್ರತಿಜ್ಞೆ ಈ ಯೋಧರು ಸೈಪ್ರೆಸ್ ಮೂಲಕ ಜೋರ್ಡಾನ್‌ಗೆ ಪಯಣಿಸಿದರು.

ಹತ್ತುವಾರಗಳ ಕಾಲ ಬೈರೂತ್‌ನಲ್ಲಿ ಇಸ್ರೇಲಿನ ಬರ್ಬರ ಆಕ್ರಮಣದ ನೃತ್ಯ ನಡೆಯಿತು. ಜಿಯೋನ್‌ವಾದಿ ಫ್ಯಾಸಿಸ್ಟ್‌ಗಳ ಕೃತ್ಯದ ಫಲದ ಬಗ್ಗೆ ವಿಶ್ವದೆಲ್ಲೆಡೆ ಉಸಿರು ಬಿಗಿ ಹಿಡಿದು ಗಮನಿಸಲಾಯ್ತು, ವಿಯೆಟ್ನಾಂ ಹೋರಾಡದ ನಂತರದ ಅತ್ಯಂತ ಉಜ್ವಲ ಹೋರಾಟ ಇದು. ಸ್ವಾತಂತ್ರ್ಯ ಪ್ರೇಮಿ ಜನತೆಯ ಅಪಾರತ್ಯಾಗದ ಪ್ರತೀಕ ಈ ಹೋರಾಟ.

ಪಾಲೇಸ್ತೀನಿಯನರನ್ನು ನೆಲ ಸಮ ಮಾಡುತ್ತೇವೆಂದು ಇಸ್ರೆಲ್ ಜಂಭ ಕೊಚ್ಚಿಕೊಂಡದ್ದನ್ನು ಪಾಲೆಸ್ತಿನಿಯರು ಸುಳ್ಳಾಗಿಸಿದರು. ವಿಮೋಚನಾ ಸಂಘಟನೆಯನ್ನು ಪೂರ್ತಿ ಬಗ್ಗು ಬಡಿಯಲು ಇಸ್ರೇಲ್‌ಗೆ ಆಗಲಿಲ್ಲ, ಸಾವು ಬದುಕಿನ ಹೋರಾಟದಲ್ಲಿ ಅನೇಕ ಅರಬ್‌ರಾಷ್ಟ್ರಗಳು ಪಾಲೇಸ್ತೀನಿಯರಿಗೆ ಕೈಕೊಟ್ಟವು. ಪಾಲೇಸ್ತೀಯರೇನೊ ಬೈರೂತ್‌ನಿಂದ ಹಿಂತೆಗೆದಿದ್ದಾರೆ. ಆದರೆ ಹೋರಾಟ ನಿಲ್ಲುವುದು ಮಾತ್ರ ಅವರಿಗೆ ಪ್ರತ್ಯೇಕರಾಜ್ಯ ಸ್ಥಾಪನೆಯಾದ ಮೇಲೆ.

ಪ್ಯಾಲೇಸ್ತೀನಿಯರು ಅನುಭವಿಸಿದ ಕಷ್ಟ ಅಪಾರವಾದದ್ದು. ದಕ್ಷಿಣ ಬೈರೂತ್‌ಗೆ ನೀರು, ಅಹಾರ, ಉರುವಲುಗಳ, ಔಷಧಿಗಳ ಕಡಿತ-ಇಸ್ರೇಲಿಗಳಿಂದ. ಆದರೆ ಸ್ವಾತಂತ್ರ್ಯದ ಹೋರಾಟಕ್ಕಾಗಿ ಜನತೆಯಿಂದ ಅಪರಿಮಿತ ತ್ಯಾಗ.

ಅಮೇರಿಕಾದಲ್ಲಿ ತಯಾರಾದ ಹೊಸ ಹೊಸ ಬಗೆಯ ಬಾಂಬುಗಳ ಪರಿಣಾಮದ ಬಗ್ಗೆ ಸಾಮ್ರಾಜ್ಯಶಾಹಿಗಳಿಗೆಸಂತಸ. ಇತ್ತ ಪಾಲೇಸ್ತೀನಿಯರು ಅಗಲಿದ ಬಂಧುಗಳಿಗೆ ಕಣ್ಣೀರಿಟ್ಟರು, ಪುನಃ ಬಂದೂಕುಗಳನ್ನೆತ್ತಿ ಹೋರಾಟಕ್ಕೆ ಸಜ್ಜಾದರು.

ವಿದಾಯ ಸಮಯದಲ್ಲಿ ಜನ ಸಮೂಹದಿಂದ ಘೋಷಣೆಗಳು ಮೊಳಗಿದವು "ನಾವೆಂದೂ ಶರಣಾಗುವುದಿಲ್ಲ" "ಬಂದೂಕು ಹಿಡಿಯುತ್ತೇವೆ"– ಹೋರಾಟವನ್ನು ಮುಂದುವರಿಸುವ ಧೃಡನಿಶ್ಚಯ ಅವರಲ್ಲಿ ಕಂಡುಬರುತಿತ್ತು,

ದಾಳಿಯಿಂದಾಗಿ ಆಸ್ಪತ್ರೆಗಳೂ ಸೇರಿದಂತೆ ಸುಮಾರು ಕಾಲು ಭಾಗದಷ್ಟು ಕಟ್ಟಡಗಳು ಕುಸಿದು ಬಿದ್ದಿವೆ. ಅಂತಹದುರಲ್ಲಿ ಪಾಲೇಸ್ತೀಯವರ ಧೃಢ ನಿಶ್ಚಯದ ಹೋರಾಟ ಗಮನಾರ್ಹವಾದದ್ದು.

ಮಾನವತೆಗೆ ಅಪಚಾರ

ಇಸ್ರೇಲಿ ಆಕ್ರಮಣದ ಕುರಿತು ಅಂತರಾಷ್ಟ್ರೀಯ ವಿಚಾರಣ ಆಯೋಗ ತನಿಖೆ ನಡೆಸಿತು. ಭಾರತದ ನ್ಯಾಯವಾದಿ ಶ್ರೀ ಪಿ. ಎ ದೇಸಾಯಿ ಅದರ ಸದಸ್ಯರಲ್ಲೊಬ್ಬರು. ಆಗಸ್ಟ್ 21 ರಂದು ದೆಹಲಿಯಲ್ಲಿ, ಇಸ್ರೇಲಿ ಆಕ್ರಮಣವನ್ನು ಹೇಯ ಕೃತ್ಯವೆಂದು ಅವರು ಬಣ್ಣಿಸಿದರು. ನಿಷೇಧಿತ ಅಸ್ತ್ರಗಳನ್ನು ಬಳಸಿ ಅಂತರಾಷ್ಟ್ರೀಯ ಯುದ್ಧ ಕರಾರಿನ 8 ನಿಯಮಗಳನ್ನು ಮುರಿದು ಆಕ್ರಮಣ ನಡೆಸಿದುದಾಗಿ ಅವರು ಆಪಾದಿಸಿದರು. ಲೆಬನಾನದಲ್ಲಿ ಆ ನಗರಗಳು ಆಸ್ಪತ್ರೆಗಳು ದಾಳಿಯಿಂದ ನೆಲಸಮವಾಗಿವೆ. ನವೀನ ಬಾಂಬುಗಳ ಬಳಕೆಯಿಂದ ಸಾವಿರಾರು ನಾಗರೀ

(8ನೇ ಪುಟ ನೋಡಿ)

ರೈತ ಸಂಘದ ಚಟುವಟಿಕೆಗಳು

ಬೆಂಗಳೂರು :

ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಒತ್ತಾಯ

ಜಿಲ್ಲೆಯ ಎಲ್ಲ ಹನ್ನೊಂದು ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಪರಿಸ್ಥಿತಿ ಗಂಭೀರವಾಗಿದೆ. ಕೆಲವೆಡೆ ಬಿತ್ತನೆಯೂ ನಡೆದಿಲ್ಲ ಕೆಲವೆಡೆ ಬಿತ್ತಿರುವ ಬೆಳೆ ಒಣಗಿ ಹೋಗಿವೆ. ಜಾನುವಾರುಗಳಿಗೆ ನೀರು-ಮೇವಿಲ್ಲದೇ ಹಾಹಾಕಾರ ಉಂಟಾಗಿದೆ. ಜಿಲ್ಲೆಯ ಭೀಕರ ಪರಿಸ್ಥಿತಿಯನ್ನು ಮನಗಂಡು ಕೂಡಲೇ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ| ಲಕ್ಕಣ್ಣ ಒತ್ತಾಯಿಸಿದ್ದಾರೆ.

13-9-82 ರಂದು ಜಿಲ್ಲಾ ಘಟಕದ ಸಭೆಯು ಕಾಂ| ಜಿ.ಪಿ.ಗಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪರಿಸ್ಥಿತಿಯನ್ನು ಅವಲೋಕಿಸಿತು.

ಕೃಷಿ ಕಾರ್ಮಿಕರು ಕೆಲಸಗಳಿಲ್ಲದೆ ತಮ್ಮ ಊರುಗಳನ್ನೇ ಬಿಡುವ ಗಂಭೀರ ಪರಿಸ್ಥಿತಿ ಉಂಟಾಗಿದೆ. ಸರಕಾರ ಕೂಡಲೇ ಗ್ರಾಮಾಂತರ ಪ್ರದೇಶಗಳಲ್ಲಿ ಬರಗಾಲ ಪರಿಹಾರ ಕಾರ್ಯಗಳನ್ನು ಏರ್ಪಡಿಸಬೇಕೆಂದು ಸಭೆ ಒತ್ತಾಯಿಸಿದೆ. ಈ ಬೇಡಿಕೆಯ ಈಡೇರಿಕೆಗಾಗಿ ಒತ್ತಾಯಿಸಿ 11-10-82 ರಂದು ಜಿಲ್ಲಾಧಿಕಾರಿ ಕಚೇರಿಯ ಎದುರು ಮತ ಪ್ರದರ್ಶನ ನಡೆಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಮುಸ್ಕೂರು :

6-9-82 ರಂದು ಗಂಗಾವತಿ ತಾಲ್ಲೂಕಿ (ರಾಯಚೂರು ಜಿಲ್ಲೆ) ನ ಮುಸ್ಕೂರು ಗ್ರಾಮದಲ್ಲಿ ರೈತ ಸಂಘದ ಘಟಕವನ್ನು ಪ್ರಾರಂಭಿಸಲಾಗಿದೆ.

ಈ ಕುರಿತು ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ತಾಲ್ಲೂಕಿನ ಸಂಚಾಲಕ ಕಾಂ| ಎಸ್. ಎಂ. ಪಾಟೀಲ್, ದ. ಸಂ. ಸ. ನ ಸಂಚಾಲಕ ಕಾಂ| ಭಾಗ್ಯವಂತ ಹಾಗೂ ಡಿ. ವೈ ಎಫ್. ಐ. ಜಿಲ್ಲಾ ಸಂಚಾಲಕ ಕಾಂ| ಕೆ. ಗಂಗಾಧರ ಇವರುಗಳು ಮಾತನಾಡಿದರು.

ರೈತ ಸಂಘದ ಗ್ರಾಮ ಘಟಕಕ್ಕೆ ಈ ಕೆಳಕಂಡವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು :

ಸಂಚಾಲಕರಾಗಿ ಬಿ. ರಾಜಶೇಖರ ಮತ್ತು ವೈ. ಹನುಮಂತಪ್ಪ, ಸಹ ಸಂಚಾಲಕರಾಗಿ ರುದ್ರಪ್ಪ ಒಂಟಿ, ಖಜಾಂಚಿಯಾಗಿ ಬಿ. ತಿಮ್ಮಪ್ಪ ಮತ್ತು 7 ಜನ ಸದಸ್ಯರನ್ನೂ ಚುನಾಯಿಸಲಾಯಿತು.

ಹುಬ್ಬಳ್ಳಿ :

ರೈತ-ಕೂಲಿಕಾರ ಕಾರ್ಯಕರ್ತರ ಸಭೆ

6-9-82 ರಂದು ಹುಬ್ಬಳಿಯಲ್ಲಿ ಧಾರವಾಡ ಜಿಲ್ಲೆಯ ಪ್ರಮುಖ ರೈತ ಕೂಲಿಕಾರ ಕಾರ್ಯಕರ್ತರ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಹಿರಿಯ ರೈತ ಧುರೀಣ ಸಿ.ಜಿ.ಪಾಟೀಲ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ಆಗಮಿಸಿದ್ದರು.

ಜಿಲ್ಲಾ ಮಟ್ಟದಲ್ಲಿ ಚಟುವಟಿಕೆಗಳನ್ನು ನಿರ್ವಹಿಸುವಂತಾಗಲು ತಾತ್ಪೂರ್ತಿಕ ಜಿಲ್ಲಾ ಸಮಿತಿಯೊಂದನ್ನು ರಚಿಸುವುದೆಂದು ನಿರ್ಣಯಿಸಿ 25 ಸದಸ್ಯರುಳ್ಳ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿ ಸಿ.ಜಿ.ಪಾಟೀಲ್ ಹಾಗೂ ಕಾರ್ಯದರ್ಶಿಯಾಗಿ ಗಂಗಾಧರ ಪಲ್ಲೇದ ಅವರು ಆಯ್ಕೆಗೊಂಡರು.

ಜಿಲ್ಲೆಯ 17 ತಾಲ್ಲೂಕುಗಳಲ್ಲಿ, 11 ತಾಲ್ಲೂಕುಗಳಲ್ಲಿ ತಕ್ಷಣವೇ ರೈತ ಸಂಘದ ಕಾರ್ಯಚಟುವಟಿಕೆಗಳನ್ನು ಮತ್ತು ಸಂಘಟನೆ ಕಟ್ಟುವ ಸಾಧ್ಯತೆಯನ್ನು ಗುರುತಿಸಿ ಜಿಲ್ಲೆಯಲ್ಲಿ 10,000 ಸದಸ್ಯತ್ವ ನೋಂದಾಯಿಸುವುದೆಂದು ತೀರ್ಮಾನಿಸಲಾಯಿತು.

ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆಯಲಿರುವ 'ವಿಧಾನ ಸೌಧ ಚಲೋ' ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ದೊಡ್ಡ ಸಂಖ್ಯೆಯಲ್ಲಿ ರೈತರು ಪಾಲ್ಗೊಳ್ಳುವಂತೆ ಮಾಡಬೇಕೆಂದು ತೀರ್ಮಾನಿಸಲಾಯಿತು. ಅಕ್ಟೋಬರ್ 24 ಮತ್ತು 25 ರಂದು ಹಾನಗಲ್‌ನಲ್ಲಿ ಜಿಲ್ಲಾ ಘಟಕದ ಸಮ್ಮೇಳನ ನಡೆಸುವ ತೀರ್ಮಾನ ಕೈಗೊಳ್ಳಲಾಯಿತು.

ಕೊನೆಯಲ್ಲಿ ಕಾಂ| ಗಂಗಾಧರ ಪಲ್ಲೇದ್ ವಂದಿಸಿದರು.

ತುಮಕೂರು :

ಜಿಲ್ಲಾ ಸಮಿತಿ ಸಭೆ

12-9-82 ರಂದು ತುಮಕೂರಿನಲ್ಲಿ ರೈತ ಸಂಘದ ಜಿಲ್ಲಾ ಸಮಿತಿಯ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಬಿ. ಲಿಂಗದೇವರು ವಹಿಸಿದ್ದರು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಎಚ್. ಸಿ. ಚನ್ನಪ್ಪ ಅವರು ಚಟುವಟಿಕೆಯ ವರದಿ ನೀಡಿದರು.

ಸಭೆ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿದೆ :

11-10-82 ರಂದು ತುಮಕೂರಿನಲ್ಲಿ ಜಿಲ್ಲಾ ರೈತ ಸಮ್ಮೇಳನ, ಇದರ ಅಂಗವಾಗಿ ಬೃಹತ್ ರೈತರ ಮೆರವಣಿಗೆಯನ್ನು ನಡೆಸುವ ತೀರ್ಮಾನ ಕೈಗೊಳ್ಳಲಾಯಿತು.

ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಸಾರಿ ಕೂಡಲೇ ಪರಿಹಾರ ಕಾರ್ಯ ಕೈಗೊಳ್ಳಬೇಕೆಂದು ಸರಕಾರಕ್ಕೆ ಒತ್ತಾಯಿಸಲಾಯಿತು. ಮಕ್ಕಳು, ಗರ್ಭಿಣಿಯರು ಮತ್ತು ಅಶಕ್ತರಿಗೆ ಗಂಜೀ ಕೇಂದ್ರ ತೆರೆಯುವಂತೆ ಒತ್ತಾಯಿಸಲಾಯಿತು.

ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆಯಲಿರುವ 'ವಿಧಾನ ಸೌಧ ಚಲೋ' ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ, ಸಹಿ ಸಂಗ್ರಹ ಕಾರ್ಯ ಚುರುಕಾಗಿಸುವಂತೆ ನಿರ್ಧರಿಸಲಾಯಿತು.

ಹರಪನಹಳ್ಳಿ :

ರೈತರ ಜಾಥಾ

ಹರಪನಹಳ್ಳಿ ತಾಲ್ಲೂಕಿನ ಶೃಂಗಾರ ತೋಟ ಗ್ರಾಮದಲ್ಲಿ ಇತ್ತೀಚೆಗೆ ತಾನೆ ರೈತ ಸಂಘದ ಘಟಕವನ್ನು ಪ್ರಾರಂಭಿಸಲಾಗಿದೆ.

ಗ್ರಾಮದ ಜನತೆಯನ್ನು ಬಾಧಿಸುತ್ತಿರುವ ನಾನಾ ಸಮಸ್ಯೆಗಳ ಪರಿಹಾರಕ್ಕಾಗಿ, ಭೂಹೀನರಿಗೆ ಭೂಮಿ ಕೊಡಬೇಕೆಂದು ಒತ್ತಾಯಿಸಿ 6 ಕಿ. ಮಿ. ದೂರದ ತಾಲ್ಲೂಕು ಕೇಂದ್ರ ಹರಪನಹಳ್ಳಿಗೆ ತೆರಳಿ ತಹಸಿಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಜಾಥಾದ ನೇತೃತ್ವವನ್ನು ಕಾಂ| ಪಿ. ಆರ್. ವೆಂಕಟೇಶ್ ಮತ್ತು ಪೂರ್ಯ ನಾಯಕ್ ವಹಿಸಿದ್ದರು.

ಜಾಥಾದ ಹಿಂದಿನ ದಿನ (5-9-82) ಗ್ರಾಮದಲ್ಲಿ ಬಹಿರಂಗ ಸಭೆ ನಡೆದು ಜಾಥಾ ಯಶಸ್ವಿ ಮಾಡುವಂತೆ ಮನವಿ ಮಾಡಲಾಗಿತ್ತು.

ಕುಂದಾಪುರ :

ರೈತ ಸಂಘದ ಗ್ರಾಮ ಘಟಕದ ಸಭೆ

ಕುಂದಾಪುರ ತಾಲ್ಲೂಕಿ (ದ. ಕ. ಜಿಲ್ಲೆ)ನ ಕಂದಾವರದಲ್ಲಿ 5-9-82 ರಂದು ರೈತ ಸಂಘದ ಗ್ರಾಮ ಘಟಕದ ಸಭೆ ನಡೆಯಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಅಬ್ರಹಾಂ ಕರ್ಕಡ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಘಟಕದ ಜೊತೆ ಕಾರ್ಯದರ್ಶಿ ಕಾಂ| ವೆಂಕಟೇಶ್ ಕೋಣಿಯವರೂ ಸಭೆಯಲ್ಲಿ ಪಾಲ್ಗೊಂಡಿದ್ದರು.

ಆರಂಭದಲ್ಲಿ ಗ್ರಾಮ ಘಟಕದ ಕಾರ್ಯದರ್ಶಿ ಕಾಂ| ಶೀನ ಸಾಂತಾವರ ಅವರು ಚಟುವಟಿಕೆಯ ವರದಿ ನೀಡಿದರು. ಸರಕಾರಕ್ಕೆ ಸಲ್ಲಿಸಲಿರುವ ಮನವಿಗೆ 2000 ಸಹಿ ಸಂಗ್ರಹ ಕಾರ್ಯ ಕೂಡಲೇ ಪೂರೈಸಬೇಕೆಂದೂ ಸಭೆ ತೀರ್ಮಾನಿಸಿತು. ಗ್ರಾಮದ ವತಿಯಿಂದ ಕನಿಷ್ಟ 2 ಪ್ರತಿನಿಧಿಗಳನ್ನು ಬೆಂಗಳೂರಿನಲ್ಲಿ ನಡೆಯುವ ಮತ ಪ್ರದರ್ಶನ ಕಾರ್ಯಕ್ರಮಕ್ಕೆ ಕಳಿಸುವ ತೀರ್ಮಾನಕೈಗೊಳ್ಳಲಾಯಿತು.

ನಿವೇಶನ ರಹಿತರಿಗೆ ಸರಕಾರದ ವತಿಯಿಂದ 5 ಸೆಂಟ್ಸು 'ಕುಮ್ಕಿ' ಜಾಗ ಒದಗಿಸಬೇಕೆಂದು; ನೆರೆ ಪೀಡಿತರಿಗೆ ಪರಿಹಾರ; ಮನೆ ಕಳೆದುಕೊಂಡವರಿಗೆ ಪುನರ್‌ನಿವೇಶನ ಕೂಡಲೇ ಒದಗಿಸಿಕೊಡಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಕೈಕೊಳ್ಳಲಾಯಿತು.

ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಫೆಡರೇಶನ್‌ನ ಸಮಿತಿಯ ಸಭೆ

ಹೆಚ್ಚಿಗೆ ಕೂಲಿ ಮತ್ತು ಬೋನಸ್ಸಿಗಾಗಿ ಸಂಘಟಿತರಾಗಲು ಕರೆ

ತಾರೀಕು 4-9-198ರಂದು ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಫೆಡರೇಷನ್‌ನ ಸಮಿತಿಯ ಸಭೆಯು ಮೈಸೂರಿನಲ್ಲಿ ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಅಧ್ಯಕ್ಷರಾದ ಕಾಂ| ಕೆ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ| ಮಹಮ್ಮದ್ ದಸ್ತಗಿರ್ ಅವರು ಲಿಖಿತ ವರದಿಯನ್ನು ಸಮಿತಿಯ ಮುಂದೆ ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆದು, ಇತರ ಜಿಲ್ಲೆ ಹಾಗೂ ಪ್ರದೇಶಗಳಲ್ಲಿ ಈ ಹಿಂದೆ ಪ್ರಾವಿಡೆಂಟ್ ಫಂಡಿನ ಹಣಕ್ಕೆ ರಶೀದಿ ಪಡೆಯಲು ನಡೆದ ಹೋರಾಟದ ವರದಿಯನ್ನು ಸಮಿತಿಯ ಸದಸ್ಯರು ವರದಿ ಮಾಡಿದರು. ಈ ಬಗ್ಗೆ ಚರ್ಚೆ ನಡೆದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ನಡೆಸಿದ ಧೀರ ಹೋರಾಟ ಮತ್ತು ಮಾಡಿದ ಒಪ್ಪಂದದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಇತರ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಸೌಲತ್ತು ಹಾಗೂ ಮಾರ್ಗದರ್ಶನ ನೀಡುವಲ್ಲಿ ಮುಂದಾದುದಕ್ಕೆ ಅಭಿನಂದಿಸಲಾಯಿತು.

ಒಂದು ಸಾವಿರ ಬೀಡಿಗೆ 12 ರೂಪಾಯಿ ಮತ್ತು ಶೇಕಡಾ 20 ಬೋನಸ್ ಸಂಬಂಧಪಟ್ಟು ಕೇಳಿಕೆಗಳು ಈಗಾಗಲೇ ಮಾಲಿಕರಿಗೆ ಕಳುಹಿಸಲಾಗಿದ್ದು, ಈ ಬಗ್ಗೆ ಆದಷ್ಟು ಬೇಗ ಇತ್ಯರ್ಥ ಮಾಡಲು ಮಾಲಿಕರನ್ನು ಒತ್ತಾಯಿಸಲಾಗುತ್ತಿದೆ. ಈ ಮುಖ್ಯ ಕೇಳಿಕೆಗಳನ್ನು ಪಡೆಯಲು ಹಾಗೂ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಲು ತಾರೀಕು 25-9-1982 ರಂದು ಮೈಸೂರಿನಲ್ಲಿ ಬೀಡಿ ಕಾರ್ಮಿಕರ ಫೆಡರೇಷನ್‌ನ ರಾಜ್ಯ ಸಮಿತಿಯು ಸೇರಲು ನಿರ್ಧರಿಸಲಾಯಿತು. ಬೀಡಿ ಕಾರ್ಮಿಕರ ಮಧ್ಯೆ ಹೆಚ್ಚಿನ ಪ್ರಚಾರ ನಡೆಸಿ, ಸಂಘಟಿತ ಹೋರಾಟಕ್ಕೆ ಸಿದ್ಧತೆ ನಡೆಸುವಂತೆ ಸಮಿತಿಯು ಕರೆ ನೀಡಿರುತ್ತದೆ.

ಸೆಕೆಂಡರಿ ಶಾಲಾ ನೌಕರರ ಸಮಾವೇಶ

ತುಮಕೂರು ತಾಲ್ಲೂಕು ಸೆಕೆಂಡರಿ ಶಾಲಾ ನೌಕರರು ಕರ್ನಾಟಕ ರಾಜ್ಯ ಸೆಕೆಂಡರಿ ಶಾಲಾ ಸ್ಮಾರಕ ಸಂಘದ ಆಶ್ರಯದಲ್ಲಿ ತುಮಕೂರಿನ ಆರ್ಯನ್ ಪ್ರೌಢ ಶಾಲೆಯಲ್ಲಿ 4-9-82 ರಂದು ಸಭೆ ಸೇರಿದ್ದರು.

ಡಿ. ಡಿ. ಪಿ. ಐ. ಕಛೇರಿ ವಿಷಯ, ಪರೀಕ್ಷಾ ಮಸೂದೆ, ಅಗತ್ಯ ಸೇವಾ ಮಸೂದೆ, ಗೋಕಾಕ ವರದಿ, ಹೆಚ್. ಆರ್.ಎ., ವೈದ್ಯಕೀಯ ಭತ್ಯ, ಹೆಚ್. ನರಸಿಂಹಯ್ಯನವರ ಸಮಿತಿ, ರಾಜ್ಯೋತ್ಸವದ ಕೊಡುಗೆ, ದೈಹಿಕ ಶಿಕ್ಷಕರುಗಳ ಸಮಸ್ಯೆ ಮುಂತಾದ ವೃತ್ತಿ ಸಂಬಂಧವಾದ ವಿಷಯಗಳನ್ನು ಕುರಿತು ಚರ್ಚಿಸಿ ತತ್ಸಂಬಂಧವಾದ ನಿರ್ಣಯಗಳನ್ನು ಸಂಬಂಧಪಟ್ಟವರ ಅವಗಾಹನೆಗೆ ತಂದು ಈಡೇರಿಕೆಗಾಗಿ ಒತ್ತಾಯಿಸುವಂತೆ ತೀರ್ಮಾನಿಸಿತು. ಊರ್ಡಿಗೆರೆ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ವಿ. ಎಸ್. ಸೂರ್ಯನಾರಾಯಣಚಾರ್ ಅಧ್ಯಕ್ಷತೆ ವಹಿಸಿದ್ದರು. ಆರ್ಯನ್ ಹೈಸ್ಕೂಲಿನ ಸ|| ಶಿ|| ರಾದ ಜಿ. ವಿ ಸೂರ್ಯನಾರಾಯಣ ಮುಖ್ಯ ಅತಿಥಿಗಳಾಗಿದ್ದರು. ಸಂಘದ ಸಹ ಕಾರ್ಯದರ್ಶಿ ಆರ್. ಎನ್. ಸದಾನಂದ ಸ್ವಾಗತಿಸಿದರು. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ. ಯತಿರಾಜು ಸಂಘಟನಾ ವರದಿಯನ್ನೊಪ್ಪಿಸಿದರು. ಕಾರ್ಯದರ್ಶಿ ದ್ಯಾವಣ್ಣ ಸಭೆಯ ಸಮಾರೋಪ ಮತ್ತು ವಂದನೆ ನಿರ್ಣಯ ಮಾಡಿದರು.

ಕರ್ನಾಟಕ ರಾಜ್ಯದಲ್ಲಿ:

ಮಸೀದಿ ನಾಶ - ಗಣಪತಿ ನಾಪತ್ತೆಯಲ್ಲೂ ರಾಜಕಾರಣವೇ ?

— ಎನ್ಕೆ

ಮಿರ್ಜಾ ಇಸ್ಮಾಯಿಲ್, ಎಂ.ವಿಶ್ವೇಶ್ವರಯ್ಯನಂಥವರು ಮೈಸೂರು–ಬೆಂಗಳೂರು ನಗರಗಳನ್ನು ಸುಯೋಜಿತ ರೀತಿಯಲ್ಲಿ ಬೆಳೆಸಿ ಹೆಸರುಗಳಿಸಿದ್ದಾರೆ. ಆ ಕಾಲದಲ್ಲಿ ಜಾತಿ ರಾಜಕೀಯ ಇದ್ದಿಲ್ಲ. ಯಾವ ಜಾತಿಯವನೇ ಆಗಲಿ ನಗರ ಸೌಂದರ್ಯಕ್ಕೆ ಅಡ್ಡಿಯನ್ನುಂಟುಮಾಡಿದರೆ ಅಂಥವರ ಮೇಲೆ ಕ್ರಮ ತೆಗೆದುಕೊಂಡಾಗ ಯಾರೂ ಮಧ್ಯೆ ಪ್ರವೇಶಿಸುತ್ತಿರಲಿಲ್ಲವಂತೆ. ಈಗ ಹಾಗಲ್ಲ. ಗಟಾರ, ಪಾಯಖಾನೆ, ರಸ್ತೆ, ಕಟ್ಟಡ, ಮಸೀದಿ, ದೇವಸ್ಥಾನ ಎಲ್ಲದರಲ್ಲೂ ರಾಜಕೀಯವೇ ತುಂಬಿ ತುಳುಕುತ್ತಿದೆ.

ಹಿಂದೂ–ಮುಸಲ್ಮಾನರಿಬ್ಬರೂ ತಪ್ಪು ಮಾಡುತ್ತಾರೆ. ಜನರ ಅನಾನುಕೂಲತೆಗಳ ಕುರಿತು ಗಂಭೀರ ವಿಚಾರ ಮಾಡದೆ, ರಸ್ತೆ ಬದಿಯಲ್ಲಿ ಸ್ವಲ್ಪ ಖಾಲಿಜಾಗ ಕಂಡಲ್ಲೆಲ್ಲ ಮದಾರ-ಗಣಪತಿ ಸ್ಥಾಪಿಸುವ ಅವಿಚಾರದ ಕೆಲಸಗಳು ಪ್ರತಿಯೊಂದು ನಗರದಲ್ಲೂ ನಡೆಯುತ್ತಿದೆ. ಮತೀಯ ದ್ವೇಷ ಬೆಳೆಸಲು ರಾಜಕಾರಣಿಗಳಿಗೆ ಇದು ಅತ್ಯಂತ ಸುಲಭ ಅಸ್ತ್ರವಾಗಿಬಿಟ್ಟಿದೆ. ಜಮಾಯತೆ ಇಸ್ಲಾಂ - ಆರ್. ಎಸ್. ಎಸ್.ರಂಥವರಿಗೆ ಇವುಗಳಿಂದ ಹೊಟ್ಟೆ ತುಂಬ ಅನ್ನಸಿಗುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಕೆಲವು ದಿವಸಗಳ ಹಿಂದೆ ವಿವೇಕನಗರದಲ್ಲಿ ಕಚ್ಚಾ ಮಸೀದಿಯನ್ನು ಕೆಡವಿದಾಗ ಮಾಜಿ ಮಂತ್ರಿ ಇಬ್ರಾಹಿಂನಂಥವರು ಉರಿಕಾರಿ ಜಾತೀಯ ದ್ವೇಷ ಬೆಳೆಸುವಂಥ ಹೇಳಿಕೆಗಳನ್ನಿತ್ತರು. ಮಾರ್ಕೆಟ್ಟಿನ ಹತ್ತಿರವಿದ್ದ ಗಣೇಶ ಪ್ರತಿಮೆಯನ್ನು ಕಿತ್ತು ಹಾಕಿದಾಗ ಮತ್ತೊಬ್ಬ ಕಾಂಗ್ರೆ ಮುಖಂಡ ಶ್ರೀಮತಿ ಪ್ರಮೀಳ ಅವರು ತಮ್ಮ ಪ್ರತಿಭಟನೆ ವ್ಯಕ್ತ ಮಾಡಿದರು. ತಮ್ಮದೇ ಪ್ರಾಧಿಕಾರ, ತಮ್ಮದೇ ಆಡಳಿತೆಯಿರುವಾಗ ಸರಕಾರ ಇಂಥ ಕ್ರಮವನ್ನೇಕೆ ಅನುಸರಿಸಿತೆಂದು ನೀವು ಕೇಳಬಹುದು. ಇನ್ನು ನಾಲ್ಕೈದು ತಿಂಗಳಲ್ಲಿ ಚುನಾವಣೆ ಬರುತ್ತದೆ. ಬೆಂಗಳೂರು ನಗರದಲ್ಲಿ ನಡೆದ ಘಟನೆಗಳಿಂದ ಆಳುವ ಕಾಂಗ್ರೆಸ್ ಮುಖಂಡರಿಗೆ ಲಾಭ. ಕಚ್ಚಾ ಮಸೀದಿ ಕೆಡವಿದ್ದು–ಗಣಪತಿ ವಿಗ್ರಹ ಕಿತ್ತಿದ್ದು-ಎರಡು ಘಟನೆಗಳನ್ನೂ ಖಂಡಿಸಿ, ಮಸೀದಿ ಕಟ್ಟಿಸಿಕೊಟ್ಟು, ವಿಗ್ರಹ ಪುನಃ ಸ್ಥಾಪಿಸಿ-ಅವೆರಡನ್ನೂ ಸರಕಾರದ ಖರ್ಚಿನಿಂದಲೇ ಮಾಡಿ, ಮಂತ್ರಿಗಳ ಅಮೃತ ಹಸ್ತದಿಂದ ಉದ್ಘಾಟನಾ ಸಮಾರಂಭ ಮಾಡಿದ್ದಾದರೆ ಅಧಿಕಾರಿಗಳು ಕಿತ್ತು ಹಾಕಿದರು, ಮಂತ್ರಿಗಳು ಕಟ್ಟಿಸಿಕೊಟ್ಟರು ಎಂದು ಹೊಗಳಿಸಿಕೊಂಡು ಓಟು ಗಿಟ್ಟಿಸಿಕೊಳ್ಳಬಹುದಲ್ಲ. ಇದೊಳ್ಳೇ ಮಂತ್ರಜಾಲವಲ್ಲವೇ ? ಇದಕ್ಕೇನೇ ರಾಜಕೀಯ ಜಾಣತನವೆನ್ನುವುದು.

ನನಗೇನು ಗೊತ್ತು— ಇಂದಿರಾ ಅವರನ್ನು ಕೇಳಿ

ಅವರು ಒಟ್ಟು ಹದಿನೇಳು ಜನ. ಎಲ್ಲರೂ ಖಾದಿದಾರಿಗಳೇ. ಎಂ.ಎಲ್.ಎ. ಸಾಹೇಬರ ಮನೆಗೆ ಹೋದರು. ಬಾಗಿಲು ಹಾಕಿತ್ತು ಸಾಹೇಬರೇ. ಎಂದು ನಾಲ್ಕು ಸಲ ಕರೆದರು. ಸಾಹೇಬರು ಬಾಗಿಲು ತೆರೆದರು. ಹದಿನೇಳು ಜನರೂ ಒಳಗೆ ಹೋದರು. ಎಲ್ಲರಿಗೂ ಕೂಡಲು ಕುರ್ಚಿ ಇರಲಿಲ್ಲ. "ಸ್ವಾಮಿ ಹೋದ ಚುನಾವಣೆಯಲ್ಲಿ ನಾವೆಲ್ಲ ಬಹಳ ಪ್ರಯತ್ನ ಮಾಡಿ ನಿಮಗೆ ಓಟು ಹಾಕಿಸಿದ್ದೆವು, ಜನರ ಕೆಲಸಗಳಾಗಬೇಕೆಂದು ಹಲವಾರು ಅರ್ಜಿಗಳನ್ನೂ ಕೊಟ್ಟಿದ್ದೆವು. ನಾವೇ ಸ್ವತಃ ತಿಳಿಸಿದ್ದೆವು. ಯಾವ ಕೆಲಸ ಕೂಡ ಆಗಿರುವುದಿಲ್ಲ. ಮತ್ತೆ ಚುನಾವಣೆ ಬಂದಿದೆ. ಈ ವರ್ಷ ಬರಗಾಲ ಬೇರೆ ನೀವೇ ನೋಡುತ್ತಿದ್ದೀರಿ... ಇಂಥ ಕೆಲಸಗಳನ್ನು ಮಾಡದಿದ್ದರೆ ಮುಂಬರುವ ಚುನಾವಣೆಯಲ್ಲಿ ನಿಮಗೆ, ನಮ್ಮ ಪಾರ್ಟಿಗೆ ಮತಹಾಕಿಸುವುದು ಬಹಳ ಕಷ್ಟ" ವೆಂದೆಲ್ಲ ಹೇಳಿದರು. ಎಂ.ಎಲ್.ಎ. ಸಾಹೇಬರು ನಿವೆಲ್ಲ ಹೊರಗೆ ಹೋಗಿ ನನಗೆ ಪುರುಸೊತ್ತಿಲ್ಲೆಂದು ಹೇಳಿ ಎಲ್ಲರನ್ನೂ ಹೊರಗೆ ಹಾಕಿ ಬಾಗಿಲು ಮುಚ್ಚಿದರು. ಎಲ್ಲರೂ ಅಂಗಳದ ಹೊರಗೆ ಹೋದರು. ಏನು ತೋಚಿತೋ ಏನೋ. ಎಲ್ಲರೂ ಬಿಗಿ ಮುಖ ಮಾಡಿಕೊಂಡು ಒಳಗೆ ಬಂದರು, ಕಾಲಿನಿಂದ ಒದ್ದು ಬಾಗಿಲು ಮುರಿದರು ಸಾಹೇಬರು ಮಲಗಿರುವ ಕೋಣೆಗೆ ನುಗ್ಗಿದರು. ಘಾಬರಿಯಾದ ಎಂ. ಎಲ್ ಎ. ಸಾಹೇಬರು ಎದ್ದು ಕೂಡುತ್ತಲೇ ಸಿಟ್ಟಿನಿಂದ "ನನಗೆ ಯಾಕೆ ಕೆಲಸ ಕೇಳುತ್ತೀರಿ ನೀವು ನನಗೆ ಓಟು ಹಾಕಿಲ್ಲ. ನೀವು ಇಂದಿರಾ ಗಾಂಧಿಗೆ, ಅವಳ ಹಸ್ತಕ್ಕೆ ಮತ ಹಾಕಿಸಿದ್ದಿರಿ. ಹೋಗಿ ಅವಳಿಗೆ ಕೇಳಿ ಯಾಕೆ ಕೆಲಸ ಮಾಡಿಲ್ಲೆಂದು. ನಾನೇನು ಮಾಡಲಿ'' ಎಂದು ಸಿಟ್ಟಿನಿಂದ ಒದರಾಡ ಹತ್ತಿದರು. ಖಾದಿಧಾರಿ ಮುಖಂಡರೆಲ್ಲ ಸಾಹೇಬರಿಗೆ ಚೆನ್ನಾಗಿ ಥಳಿಸಿ ಹೊರಟು ಹೋದರು.

ಇದೊಂದು ಜೀವಂತ ಘಟನೆ. ಓಟುಗಳೆಲ್ಲ ಬಿದ್ದಿರುವುದು ಇಂದಿರಾ ಗಾಂಧಿಯ ಹಸ್ತಕ್ಕೆ. ಕಾಂಗ್ರೆಸ್ ಉಮೇದುವಾರರಿಗಲ್ಲ. ಇಂದಿರಾ ಕೃಪೆಯಿಂದ ಆರಿಸಿಬರಲಿಕ್ಕೆ ಜನಸೇವೆ ಅಗತ್ಯವಿಲ್ಲ. ಇಂದಿರಾ–ರಾಜೀವ ಸಮಾರಾಧನೆ ಸಾಕಷ್ಟೆ. ಜಾಣ ಎಂ.ಎಲ್.ಎ. ಸಾಹೇಬರು, ಜನರಿಗೆ ಬುದ್ಧಿಯಿಲ್ಲ, ಸಾಹೇಬರೇನು ಮಾಡಲಿ.

ಏಳನೆಯ ತರಗತಿಗೆ ಮತ್ತೆ ಪಬ್ಲಿಕ್ ಪರೀಕ್ಷೆ

ಸ್ವಾತಂತ್ರ್ಯ ಪಡೆದು 35 ವರ್ಷಗಳಾದರೂ ಕಾಂಗ್ರೆ ಆಳುವ ರಾಜ್ಯಗಳಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ಉಚ್ಚಮಟ್ಟದವರೆಗೆ ನಿರ್ಧಿಷ್ಟ ಶಿಕ್ಷಣ ನಿರೂಪಣೆ ಇಲ್ಲದಿರುವುದನ್ನು ನೋಡುತ್ತಾ ಬಂದಿದ್ದೇವೆ. ಪ್ರತಿ ಮಂತ್ರಿಗೊಂದು ಧೋರಣೆಯಲ್ಲದೆ ಆಳುವ ಕಾಂಗ್ರೆ ಪಕ್ಷಕ್ಕೆ ವಿದ್ಯಾಭ್ಯಾಸದ ಕುರಿತು ಸ್ಪಷ್ಟ ಧೋರಣೆ ಇಲ್ಲದಿರುವುದು ಚಿಂತನೀಯ. ಕೆಲವು ವರ್ಷ ಪಿ.ಯು ಸಿ.ಗಾಗಿ ಒಂದು ವರ್ಷವೊ ಎರಡೋ ಎಂಬ ಚರ್ಚೆ ನಡೆದು ಎರಡು ವರ್ಷವಾಯಿತು.

ಕೆಲವು ವರ್ಷ ಆಯಾ ಶಾಲೆ ಮಟ್ಟದಲ್ಲೇ ಪರೀಕ್ಷೆ ಫಲಿತಾಂಶ ಪ್ರಕಟಿಸಲಾಗುತ್ತಿತ್ತು ಆದರೆ ಇದರಿಂದ ಪ್ರೌಢಶಾಲೆಯ ಶಿಕ್ಷಣ ಮಟ್ಟ ಕುಸಿಯುತ್ತಿದೆಂಬ ಆರೋಪಗಳು ಬಂದುದರಿಂದ ಪಬ್ಲಿಕ್ ಪರೀಕ್ಷೆಗಳನ್ನು ನಡೆಸಬೇಕೆಂಬ ಒತ್ತಾಯ ಬಂತಂತೆ. ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ಪತ್ರಿಕೆಗಳನ್ನು ಸಿದ್ಧಗೊಳಿಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುವುದಂತೆ.

ನಮ್ಮ ಮುಂದಿರುವುದು ಪರೀಕ್ಷೆ ಮಹತ್ವವೋ ಅಥವಾ ಶಿಕ್ಷಣ ಮಹತ್ವವೋ ಎಂಬ ಪ್ರಶ್ನೆ. ಬಂಡವಾಳಶಾಹಿ–ಭೂಮಾಲಿಕ ವರ್ಗದ ಕಾಂಗ್ರೆ ಸರಕಾರ ಬ್ರಿಟಿಷರು ಹಾಕಿಕೊಟ್ಟ ದಾರಿಯಲ್ಲೇ ಮುನ್ನಡೆಯುತ್ತಿದೆ. ಸರಿಯಾದ ಪಠ್ಯ ಪುಸ್ತಕಗಳಿಲ್ಲ, ಮಕ್ಕಳಿಗೆ ಕಲಿಸುವಾಗ ಶಿಕ್ಷಕರ ವಿಚಾರ ದೂರದ ಹೊಲದಲ್ಲೋ, ಮನೆ ಮಕ್ಕಳ ಕಷ್ಟಗಳಲ್ಲೋ, ಸರಿಯಿಲ್ಲದ ಪರಿಸರಗಳಲ್ಲೋ- ಹೀಗಾಗಿ ನಮ್ಮ ಮಕ್ಕಳು ಎದುರಿಸುತ್ತಿರುವ ಪ್ರಶ್ನೆ ಪಬ್ಲಿಕ್ ಪರೀಕ್ಷೆಯದ್ದಲ್ಲ. ಚಿಕ್ಕಮಕ್ಕಳಿಗೆ ಪಾಠ ಕಲಿಸುವ ಪದ್ಧತಿಯಲ್ಲಿ, ಶಿಕ್ಷಕರು ಕಲಿಸುವ ರೀತಿಯಲ್ಲಿ ಮೂಲಭೂತ ಬದಲಾವಣೆಗಳಾಗಬೇಕಾಗಿದೆ. ಅದಾಗಬೇಕಾದರೆ ಈ ಸರಕಾರ ಹೋಗಬೇಕು, ಜನತಾ ಪ್ರಜಾಪ್ರಭುತ್ವ ರಂಗದ ಸರಕಾರ ಬರಬೇಕು. ಈಗಿರುವ ಸಮಾಜ ಪದ್ಧತಿಯಲ್ಲಿ ಬದಲಾವಣೆಯಾಗಬೇಕು. ಅಂಥ ಬದಲಾವಣೆ ತರಲು ಎಲ್ಲರೂ ಶ್ರಮಿಸಬೇಕು.

ಮಂತ್ರಿಗಳಿಗೆ ಅಧಿಕಾರವಿದೆ, ಆತ್ಮಗೌರವವಿಲ್ಲ

ಸಮಾಜ ಕಾರ್ಯಕರ್ತರು ಸ್ಫೂರ್ತಿ, ಮಾರ್ಗದರ್ಶನ ಮತ್ತು ಮನ್ನಣೆಗಳಿಗಾಗಿ ರಾಜಕಾರಣಿಗಳು ವಿಶೇಷತಃ ಮಂತ್ರಿಗಳ ಬೆನ್ನು ಬೀಳಬಾರದೆಂದು ಕರೆ ನೀಡಿದವರು ರಾಷ್ಟ್ರಪತಿ ಜೇಲ್ ಸಿಂಗ್ ಅವರು. ಮಂತ್ರಿಗಳಿಗೆ ಅಧಿಕಾರವಿರುತ್ತದೆ ಆದರೆ ಆತ್ಮ ಗೌರವ ಇರುವುದಿಲ್ಲವೆಂದೂ ಜೇಲ್‌ಸಿಂಗರು ಆಚಾರ್ಯ ವಿನೋಭಾಭಾವೆಯವರ 88ನೇ ಜನ್ಮ ದಿನದ ಅಂಗವಾಗಿ ರಾಜಘಾಟದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಂತ್ರಿಗಳ ತಲೆಯನ್ನೇ ಬೋಳಿಸಿದರು. ಸಚಿವರುಗಳು ತಾವೇ ದೊಡ್ಡವರು ಎಂಬ ಭಾವನೆಯಲ್ಲಿರಬಹುದು. ಆದರೆ ಅವರಿಗೆ ಮುಖ ಬೆಲೆ ಇರಬಹುದೇ ವಿನ ಅಂತರ್ಗತ ಮೌಲ್ಯವಿರುವುದಿಲ್ಲೆಂಬ ಆತ್ಮ ಶುದ್ಧಿಯ ಗುಣಗಾನ ಮಾಡಿದರು.

ಹಲವಾರು ವರ್ಷ ತಾನೂ ಮಂತ್ರಿಯಾಗಿದ್ದೆ, ಈ ಉಚ್ಚ ಮಟ್ಟದ ಗುಣಗಳೆಲ್ಲ ತನ್ನಲ್ಲೂ ಅಳವಡಿಸಿಕೊಂಡಿದ್ದವು ಎಂಬ ನಿಜ ಸಂಗತಿಯನ್ನು ಹೇಳಿ ತಮ್ಮ ಆತ್ಮ ಸಂಶೋಧನೆ ಮಾಡಿಕೊಳ್ಳಲಿಲ್ಲವಲ್ಲ ರಾಷ್ಟ್ರಪತಿ ಸ್ಥಾನಕ್ಕೇರಿದ ಜೇಲ್ ಸಿಂಗರು ;

ವಿರೋಧ ಪಕ್ಷದವರು ಈ ಮಾತುಗಳನ್ನಾಡುತ್ತಿದ್ದರೆ, ದ್ವೇಷ ಮನೋಭಾವನೆಯಿಂದ ಈ ಮಾತುಗಳನ್ನಾಡಲಾಗುತ್ತಿದೆಂದು ಇಂದಿರಾ ಗಾಂಧಿ ವಿಷಕಾರುತ್ತಿದ್ದರು "ನನ್ನ ಹುಡುಗನೇ ಈ ರೀತಿಯ ಹೀನಾಯ ಮಾತುಗಳನ್ನಾಡಿದಾಗ ?" ಇಂದಿರಾ ಗಾಂಧಿ ಕಣ್ಣು ಮುಚ್ಚಿಕೊಡು ಧ್ಯಾನದಲ್ಲಿ ಮಗ್ನರಾದಂತೆ ತೋರಿಸಿದರಂತೆ.

ಕಾಂಗ್ರೆ ಮಂತ್ರಿಗಳಿಗೆ ಆತ್ಮವೂ ಇಲ್ಲ ಗೌರವವೂ ಇಲ್ಲವಲ್ಲ. ಗುಂಡೂರಾಯರ ಉದಾಹರಣೆ ಕೊಡಲೇ ?

ಕೃಷ್ಣಾ ನದಿ ತುಂಬಿದೆ ರೈತರಿಗೆ ನೀರಿಲ್ಲ

ಕೃಷ್ಣಾ ನದಿ ತುಂಬ ನೀರು. ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಆಣೆಕಟ್ಟು ಪೂರ್ಣಗೊಂಡು ನೀರಿನಿಂದ ತುಂಬಿತುಳುಕುತ್ತಿದೆ. ಜೂನ್ ತಿಂಗಳಿಂದಲೇ ನೀರನ್ನು ಒದಗಿಸಬೇಕಾಗಿತ್ತು. ಗುಲ್ಬರ್ಗಾ ಜಿಲ್ಲೆಯ 8-10 ಹಳ್ಳಿಗಳಲ್ಲಿ ಮಳೆಯ ಅಭಾವದಿಂದ ಬೆಳೆ ಒಣಗುತ್ತಿದೆ. ಗುಂಡೂರಾಯರ ಅಮೃತ ಹಸ್ತದಿಂದಲೇ ಈ ಆಣೆಕಟ್ಟಿನ ಉದ್ಘಾಟನೆಯಾಗಿ ರೈತರ ಹೊಲಕ್ಕೆ ನೀರುಣಿಸಬೇಕಾಗಿತ್ತು. 3 ತಿಂಗಳಿಂದಲೂ ಮುಖ್ಯ ಮಂತ್ರಿಯವರಿಗೆ ಪುರಸೊತ್ತಿದ್ದಿಲ್ಲ. ಸೆಪ್ಟೆಂಬರ್ 9 ರಂದು ವಿಜೃಂಭಣೆಯ ಉದ್ಘಾಟನಾ ಸಮಾರಂಭ. ನಿರಾವರಿ ಖಾತೆಯವರು ರೂ. 3 ಲಕ್ಷಕ್ಕೂ ಮೇಲ್ಪಟ್ಟು ಹಣ ಖರ್ಚು ಮಾಡಿದ ಸಮಾರಂಭ. ಬುಧವಾರ 8ರ ರಾತ್ರಿ ಶೇಖ್ ಅಬ್ದುಲ್ಲಾ ತೀರಿಕೊಂಡ ಸುದ್ದಿ ಕೇಳಿ ಗುಂಡೂರಾಯರು ಕಾಶ್ಮೀರಕ್ಕೆ ಓಡಿದರು. ಆದರೆ ಆ ರೀತಿ ಓಡಿ ಹೋಗುವಾಗ ತಮ್ಮ ಜೊತೆಗಿದ್ದ ಧರ್ಮಸಿಂಗ್, ಪಾಟೀಲ್, ಕಸ್ಬೆ ಮೊದಲಾದವರಿಗೆ ಸಮಾರಂಭ ಮುಗಿಸಿ ರೈತರಿಗೆ ನೀರು ಒದಗಿಸಿರೆಂದು ಹೇಳುವ ಸೌಹಾರ್ದತೆ ತೋರಿಸಲಿಲ್ಲ. ಅಲ್ಲೇ ಉಳಿದ ಮಂತ್ರಿಗಳ ಮೆದುಳಿಗೆ ಬರಗಾಲದ ಬಿಸಿಯಾಗಲೀ ಬೆಳೆ ಒಣಗಿ ಕಂಗಾಲಾದ ರೈತರ ರೋಧನವಾಗಲೀ ಕೇಳಿಸಲಿಲ್ಲ. ಕಾರ್ಯಕ್ರಮ ರದ್ದಾಯಿತು. ಅಣೆಕಟ್ಟು ತುಂಬಿ ನೀರು ನಿಂತಿದೆ. ಸುತ್ತ ಮುತ್ತಲ ಭೂಮಿಯಲ್ಲಿ ಬೆಳೆಗಳೆಲ್ಲ ನೀರಿಲ್ಲದೆ ಬಾಡಿ ಹೋಗಿವೆ. ಆದ್ದರಿಂದ ಮಂತ್ರಿಗಳಿಗೆ ಅಧಿಕಾರವಿದೆ, ಮುಖ ಬೆಲೆ ಇದೆ, ಆದರೆ ಅಂತರ್ಗತ ಮೌಲ್ಯವಿಲ್ಲ. ಆದ್ದರಿಂದಲೇ ಕೋಟ್ಯಾವಧಿ ರೂಪಾಯಿ ಖರ್ಚಿನಿಂದ ಆಣೆಕಟ್ಟುಗಳಾಗುತ್ತವೆ. ಆದರೆ ಅದರ ಉಪಯೋಗ ಮಾತ್ರ ಜನರಿಗಿಲ್ಲ. ○

ಹರಿಹರ :

ಚುನಾವಣಾ ಸಮಿತಿ

ಸಧ್ಯದಲ್ಲೇ ನಡೆಯಲಿರುವ ನಗರ ಸಭಾ ಚುನಾವಣೆಗಾಗಿ ಪೂರ್ವ ಸಿದ್ಧತೆಗಳನ್ನು ನಡೆಸಲು, ಚುನಾವಣೆಗೆ ನಿಧಿ ಸಂಗ್ರಹಿಸಲು ಸಿ ಪಿ ಐ (ಎಂ) ಹರಿಹರ ಘಟಕ ಚುನಾವಣಾ ಸಮಿತಿಯೊಂದನ್ನು ರಚಿಸಿದೆ. ಆಗಸ್ಟ್ 31 ರಂದು ನಡೆದ ಪಕ್ಷದ ಸಭೆಯ ಅಧ್ಯಕ್ಷತೆಯನ್ನು ಕಾಂ। ವಿ.ಜೆ.ಕೆ.ನಾಯರ್ ವಹಿಸಿದ್ದರು.

ಕಾಂ। ಜಯಣ್ಣನವರು ಕಾರ್ಯದರ್ಶಿಯಾಗಿರುವ ಸಮಿತಿಯ ಸದಸ್ಯರು ಇಂತಿದ್ದಾರೆ : ಉನ್ನಿತ್ತನ್, ಗೋವಿಂದಪ್ಪ, ಎಚ್. ಬಿ ಕೊಟ್ರಯ್ಯ, ಅಂಗಡಿ, ಆನಂದರಾವ್, ಇಕ್ಬಾಲ್ ಹುಸೇನ್, ವೈ. ಬಿ. ಕೋಖಿಡೆ, ಡಿ. ಜಿ. ಜೋಶಿ, ಪಣ್ಣುಖಪ್ಪ, ನಾರಾಯಣಸಾ ಮತ್ತು ಕಾಂ। ಭೀಮಪ್ಪರೆಡ್ಡಿ.

ಕೇಂದ್ರ ಸಮಿತಿಯ ಸಭೆಯ ಪ್ರಕಟಣೆ

ತೀವ್ರಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಭೆಯು ಆಗಸ್ಟ್ 27 ರಿಂದ 30ರವರೆಗೂ ದೆಹಲಿಯಲ್ಲಿ ಸೇರಿತ್ತು. ಪಕ್ಷದ ಹನ್ನೊಂದನೇ ಸಮಾವೇಶದ ನಂತರ ಕಳೆದ ಏಳು ತಿಂಗಳಲ್ಲಿ ಆಗಿರುವ ಬೆಳವಣಿಗೆಗಳನ್ನು ಕುರಿತು ಸಭೆ ವಿಮರ್ಶೆ ನಡೆಸಿತು.

ದೇಶದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ಒರಿಸ್ಸಾ, ಬಿಹಾರ್, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ಉತ್ತರ ಪ್ರದೇಶದ ಈಶಾನ್ಯ ಹಾಗೂ ಮಧ್ಯ ಭಾಗಗಳು, ರಾಜಸ್ಥಾನ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ತೆಲಂಗಾಣ, ರಾಯಲಸೀಮ ಪ್ರದೇಶಗಳಲ್ಲಿ ಉಂಟಾಗಿರುವ ಭಯಂಕರ ಕ್ಷಾಮವನ್ನು ಕುರಿತು ಕೇಂದ್ರ ಸಮಿತಿಯು ತನ್ನ ಕಳವಳವನ್ನು ವ್ಯಕ್ತಪಡಿಸಿದೆ. ಈ ಪ್ರದೇಶಗಳ ಗಣನೀಯ ಪ್ರಮಾಣದ ಜನಸಮೂಹ—ಕೃಷಿ ಕಾರ್ಮಿಕರು, ಗ್ರಾಮೀಣ ಬಡ ಜನರು ತುಂಬಾ ಶೋಚನೀಯ ಸ್ಥಿತಿಗೆ ತಲುಪಿದ್ದಾರೆ. ಈಗಾಗಲೇ ಹಸಿವಿನಿಂದ ಸಾಯತೊಡಗಿರುವವರ ಸಂಖ್ಯೆ ಹೆಚ್ಚುತ್ತಿದೆ. ಆವರಿಸತೊಡಗಿರುವ ಬರಗಾಲದ ಕರಾಳ ನೆರಳನ್ನು ಜನ ಅಸಹಾಯಕರಾಗಿ ನೋಡುತ್ತಿದ್ದಾರೆ. ಅಕ್ಕಿಯ ಬೆಲೆ ಈಗಾಗಲೇ ಏರಿದೆ, ಇತರ ದವಸ ಧಾನ್ಯಗಳ ಬೆಲೆಗಳೂ ಇದನ್ನೇ ಅನುಸರಿಸತೊಡಗಿವೆ. ಜನತೆಯ ಈ ಎಲ್ಲಾ ಸಂಕಷ್ಟಗಳ ಜೊತೆಗೆ ಪ್ರವಾಹದ ವಾರ್ಷಿಕ ಆಗಮನವೂ ಸೇರಿಕೊಂಡು ಹೆಚ್ಚು ಸಂಖ್ಯೆಯ ಜನರನ್ನು ಬಲಿ ತೆಗೆದುಕೊಂಡು ದೊಡ್ಡ ಪ್ರಮಾಣದಲ್ಲಿ ಆಸ್ತಿ ಪಾಸ್ತಿಗಳನ್ನು ನಾಶಮಾಡಿದೆ.

ಈ ವಿಪತ್ತಿನ ಪರಿಸ್ಥಿತಿಯನ್ನೆದುರಿಸಲು ರಾಜ್ಯ ಸರ್ಕಾರಗಳಿಗೆ ನೆರವು ನೀಡುವಲ್ಲಿ ಕೇಂದ್ರ ಸರ್ಕಾರ ಸೋತಿದೆ. ಕಾಂಗ್ರೆಸ್ (ಐ) ರಾಜ್ಯಗಳಿಗೆ ನೀಡಿರುವ ಅಲ್ಪ ಸ್ವಲ್ಪ ಪರಿಹಾರಗಳೂ ಕೂಡ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಗಳಿಗೆ ಬಲಿಯಾಗಿ ದುರುಪಯೋಗಗೊಂಡಿದೆ.

ನೆರೆ ಹಾವಳಿಗೆ ತುತ್ತಾದ ರಾಜ್ಯಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಧಾನ್ಯಗಳನ್ನು ಸರಬರಾಜು ಮಾಡಬೇಕು, ಪರಿಹಾರ ಕಾರ್ಯಗಳಿಗಾಗಿ ನಿಧಿ ಒದಗಿಸಬೇಕು, ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಉದ್ಯೋಗ ಕೊಡಬೇಕು, ಸರ್ಕಾರದ ಸಾಲ ವಸೂಲಿಯನ್ನು ಕೈಬಿಡಬೇಕು, ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅಧಿಕ ಪ್ರಮಾಣದ ನೀರಾವರಿಗೆ ಹಾಗೂ ಪ್ರವಾಹ ನಿಯಂತ್ರಣಕ್ಕೆ ದೀರ್ಘಾವಧಿ ಕಾರ್ಯಕ್ರಮವನ್ನು ಕೂಡಲೇ ರೂಪಿಸಬೇಕೆಂದು ಪಕ್ಷದ ಕೇಂದ್ರ ಸಮಿತಿಯು ಭಾರತ ಸರ್ಕಾರವನ್ನು ಒತ್ತಾಯಪಡಿಸಿದೆ.

ಹದಗೆಡುತ್ತಿರುವ ಆರ್ಥಿಕತೆ

ದೇಶದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಚರ್ಚಿಸುತ್ತಾ ಈ ಅವಧಿಯಲ್ಲಿ ದೇಶದ ಆರ್ಥಿಕತೆ ಮತ್ತಷ್ಟು ಬಿಕ್ಕಟ್ಟಿಗೆ ಸಿಲುಕಿದೆಯೆಂದೂ, ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ. ಎಂ. ಎಫ್.) ಹಾಕಿರುವ ಕರಾರುಗಳನ್ನು ಒಪ್ಪಿ ಅದಕ್ಕೆ ಶರಣಾಗಿರುವುದು ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸಿದೆಯೆಂದೂ ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜನತೆಯ ಮೇಲೆ ಮತ್ತವರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನಡೆಯುತ್ತಿರುವ ಧಾಳಿಗಳನ್ನು. ಇತ್ತೀಚಿನ ಕಾರ್ಮಿಕ ವಿರೋಧೀ ಕಾಯಿದೆಗಳು, ಬಿಹಾರದ ಪತ್ರಿಕಾ ನಿಯಂತ್ರಣ ಮಸೂದೆ ಮತ್ತಿತರ ಕ್ರಮಗಳು ಸಾಬೀತುಗೊಳಿಸುತ್ತವೆ. ಈ ಎಲ್ಲವುಗಳ ವಿರುದ್ಧ ಪ್ರತಿಭಟಿಸುತ್ತಿರುವ ಕಾರ್ಮಿಕ ವರ್ಗ ಹಾಗೂ ಇತರ ವಿಭಾಗಗಳ ಜನರನ್ನು ಕೇಂದ್ರ ಸಮಿತಿ ಅಭಿನಂದಿಸಿತು.

ಅಸ್ಸಾಂ, ಈಶಾನ್ಯ ಭಾಗಗಳು, ಪಂಜಾಬ್, ಜಮ್ಮು ಮತ್ತು ಕಾಶ್ಮೀರ ಮತ್ತಿತರ ಭಾಗಗಳಲ್ಲಿ ತೀವ್ರಗೊಳ್ಳುತ್ತಿರುವ ಪ್ರತ್ಯೇಕತಾವಾದಿ ಹಾಗೂ ಛಿದ್ರಕಾರೀ ಶಕ್ತಿಗಳ ಚಟುವಟಿಕೆಗಳನ್ನು ಕೇಂದ್ರ ಸಮಿತಿ ವಿಶೇಷವಾಗಿ ಪರಿಶೀಲಿಸಿತು. ಕಾಂಗ್ರೆಸ್ (ಐ) ಸರ್ಕಾರ ಸಮಸ್ಯೆಗೆ ಪ್ರಜಾಸತ್ತಾತ್ಮಕ ಪರಿಹಾರ ಕಂಡುಹಿಡಿಯುವ ಬದಲು ತನ್ನ ಅಸಹಾಯಕತೆಯನ್ನು ಪ್ರದರ್ಶಿಸುತ್ತಿದೆ.

ಪ. ಬಂಗಾಲದ ಎಡರಂಗ

ಖಾತೆಗಳ ಹಂಚಿಕೆಯ ಸಂಬಂಧವಾಗಿ ಪಶ್ಚಿಮ ಬಂಗಾಳ ಸರ್ಕಾರದಲ್ಲಿ ಉಂಟಾಗಿದ್ದ ಸಮಸ್ಯೆ ತಾತ್ಕಾಲಿಕವಾಗಿಯಾದರೂ ಬಗೆಹರಿದಿರುವುದಕ್ಕಾಗಿ ಕೇಂದ್ರ ಸಮಿತಿ ತನ್ನ ತೃಪ್ತಿಯನ್ನು ವ್ಯಕ್ತಪಡಿಸಿದೆ. ಇದು ಎಡರಂಗವನ್ನು ಮತ್ತಷ್ಟು ಬಲಪಡಿಸುವುದೆಂದು ಕೇಂದ್ರ ಸಮಿತಿ ಆಶಿಸುತ್ತದೆ ಅದೇ ಸಂದರ್ಭದಲ್ಲಿ ಖಾತೆಗಳನ್ನು ವೈಜ್ಞಾನಿಕವಾಗಿ ಪುನರ್ ಸಂಘಟಿಸಬೇಕಾದ ಅಗತ್ಯವನ್ನು ಕೂಡ ಕೇಂದ್ರ ಸಮಿತಿ ಗಮನಿಸಿದೆ. ಎಡರಂಗದ ಕೆಲವು ಅಂಗ ಪಕ್ಷಗಳು ತಮ್ಮಲ್ಲೇ ಒಮ್ಮತ ರೂಪಿಸಿಕೊಂಡು ಎಡರಂಗದ ಮತ್ತು ಒಟ್ಟಾರೆಯಾಗಿ ಹೇಳುವುದಾದರೆ ಇಡೀ ರಾಜ್ಯದ ಜನತೆಯ ಹಿತವನ್ನು ಬಲಿಕೊಟ್ಟು ತಮ್ಮ ಪಕ್ಷದ ಹಿತಕ್ಕೆ ಬೇಕಾದಂತಹ ಕ್ರಮಗಳನ್ನು ಅನುಸರಿಸತೊಡಗಿರುವುದನ್ನು ಕೇಂದ್ರಸಮಿತಿ ಗಮನಕ್ಕೆ ತೆಗೆದುಕೊಂಡಿದೆ (ನಮ್ಮ ಶತ್ರುಗಳ ಮುಖ್ಯವಾಗಿ ಕಾಂಗ್ರೆಸ್ (ಐ)) ಎಡರಂಗದ ಮುಖ್ಯ ಅಂಗ ಪಕ್ಷವಾದ ಸಿ. ಪಿ. ಐ. (ಎಂ) ರಾಜಕೀಯ ಕೂಲೆಗಳ ಚಳುವಳಿಯನ್ನು ಸಂಘಟಿಸುತ್ತಿದೆಯೆಂಬ ಅಪಾದನೆಗಳಿಗೆ ಎಡರಂಗದ ಕೆಲವು ಅಂಗ ಪಕ್ಷಗಳು ಧ್ವನಿಗೂಡಿಸಿರುವುದು ಇವೆಲ್ಲಕ್ಕಿಂತಲೂ ಹೆಚ್ಚು ಅಪಾಯಕಾರಿಯಾದುದಾಗಿದೆ. ಇಂತಹ ಚಟುವಟಿಕೆಗಳು ಎಡರಂಗದ ಐಕ್ಯತೆಗಾಗಲಿ ಅಥವ ಅದರ ಶಕ್ತಿ ವರ್ಧನೆಗಾಗಲಿ ಯಾವುದೇ ರೀತಿಯಲ್ಲೂ ಸಹಾಯಕವಾಗುವುದಿಲ್ಲವೆಂದು ಕೇಂದ್ರ ಸಮಿತಿ ಎಚ್ಚರಿಸಿದೆ.

ಪ್ರಧಾನಿಯ ಅಮೇರಿಕಾ ಭೇಟಿ

ಭಾರತದ ಪ್ರಧಾನಿಯ ಇತ್ತೀಚಿನ ಅಮೇರಿಕಾ ಭೇಟಿಯ ಪರಿಣಾಮಗಳನ್ನು ಕೇಂದ್ರ ಸಮಿತಿ ವಿಮರ್ಶಿಸಿತು. ಭಾರತದ ಈಗಿನ ಹದಗೆಟ್ಟ ಅರ್ಥ ವ್ಯವಸ್ಥೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿ ನಮ್ಮ ಮೇಲೆ ಹೊಂದಿರುವ ಹಿಡಿತವನ್ನು ದುರುಪಯೋಗಿಸಿಕೊಂಡು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತದ ಅಲಿಪ್ತ ನೀತಿಯ ವಿದೇಶಾಂಗ ಧೋರಣೆಯನ್ನು ಕೈಬಿಡುವಂತೆ ಒತ್ತಾಯ ತರುತ್ತಿದ್ದಾರೆ ಮತ್ತು ಸೋವಿಯತ್ ಯೂನಿಯನ್ನಿನೊಂದಿಗಿನ ಭಾಂದವ್ಯವನ್ನು ಸಡಿಲಗೊಳಿಸಲು ಒತ್ತಾಯಿಸುತ್ತಿದ್ದಾರೆ. ಭಾರತ ಸರ್ಕಾರ ಈ ಒತ್ತಡಗಳಿಗೆ ಬಲಿಯಾಗಿಲ್ಲವೆಂಬುದನ್ನು ಕೇಂದ್ರ ಸಮಿತಿ ಗಮನಿಸಿದೆ, ಅಲ್ಲದೆ ಸೋವಿಯತ್ ಯೂನಿಯನ್ನಿನೊಂದಿಗಿನ ನಿಕಟ ಬಾಂಧವ್ಯವನ್ನು ಕಾಪಾಡಿಕೊಂಡಿದೆ ಮತ್ತು ಕಂಪೂಚಿಯ, ಅಫ್ಘಾನಿಸ್ತಾನ್, ಹಿಂದೂ ಸಾಗರ, ನವ ಜಾಗತಿಕ ಅರ್ಥ ವ್ಯವಸ್ಥೆ ಇತ್ಯಾದಿ ಕುರಿತಂತೆ ತನ್ನ ನಿಲುವೆಯನ್ನು ಪುನರುಚ್ಚರಿಸಿದೆ. ಆದರೆ ತಾರಾಪುರ ಅಣು ಸ್ಥಾವರಕ್ಕೆ ಇಂಧನ ಸರಬರಾಜು ಕುರಿತಂತೆ ಸಾಮ್ರಾಜ್ಯಶಾಹಿಗಳ ಒತ್ತಡ ಕೆಲಸ ಮಾಡಿರುವಂತೆ ಕಾಣುತ್ತದೆ ಪ್ರಧಾನಿಯವರು ಅಮೇರಿಕಾದಲ್ಲಿ ಸಹಿ ಹಾಕಿದ ಒಪ್ಪಂದ ಭಾರತ ಘೋಷಿಸಿರುವ ನಿಲುವೆಯಿಂದ ದೂರ ಸರಿಯುವಂತೆ ಮಾಡಿದೆ. ಒಂದು ವರ್ಷದ ಕೆಳಗೆ ಮೂರನೆಯವರೊಬ್ಬರು ಇಂಧನ ಸರಬರಾಜು ಮಾಡುವ ಸೂಚನೆಯನ್ನು ತಿರಸ್ಕರಿಸಲಾಗಿತ್ತು. ಆದರೆ ಆ ನಿಲುವು ಈಗ ತಲೆಕೆಳಗಾಗಿದೆ.

ಅಂತರರಾಷ್ಟ್ರೀಯ ಪರಿಸ್ಥಿತಿ ಕೆಡುತ್ತಿರುವುದರ ಕುರಿತು ಕೇಂದ್ರ ಸಮಿತಿ ವಿಮರ್ಶೆ ನಡೆಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳೇ ಇದರ ನೇರ ಜವಾಬ್ದಾರರೆಂದು ಪರಿಗಣಿಸಿದೆ. ಅಮೇರಿಕಾ ತನ್ನ ರಕ್ಷಣಾ ವ್ಯವಸ್ಥೆಗೆ ಹಿಂದೆಂದಿಗಿಂತಲೂ ಹೆಚ್ಚು ಮೊತ್ತವನ್ನು ವೆಚ್ಚ ಮಾಡಿರುವುದಷ್ಟೇ ಅಲ್ಲದೆ, ಪೆಂಟಗನ್ (ರಕ್ಷಣಾ ಇಲಾಖೆ)ನ ಉನ್ನತ ಮಟ್ಟದಲ್ಲಿ ದೀರ್ಘ ಕಾಲದ ಅಂದರೆ ಐದು ವರ್ಷಗಳ ಅಣು ಯುದ್ಧ ನಡೆಸುವ ಕುರಿತಾಗಿ ಗಂಭೀರವಾದ ಮಾತುಕತೆಗಳು ನಡೆಯುತ್ತಿವೆ. ಅಮೇರಿಕದ ಈ ಅಣುಯುದ್ಧದ ಗುರಿ ಸೋವಿಯತ್ ಯೂನಿಯನ್ ಆಗಿದ್ದರೂ ಕೂಡ, ಜಗತ್ತಿನ ಇತರ ಭಾಗಗಳಲ್ಲಿ ಅವರ ಉದ್ದೇಶಕ್ಕೆ ಪೂರಕವಾಗುವಂತೆ ಸ್ಥಳೀಯ ಯುದ್ಧಗಳಿಗೆ ಕಿಡಿ ಹಚ್ಚುವ ಸನ್ನಾಹದಲ್ಲಿದ್ದಾರೆ. ಇವುಗಳಲ್ಲಿ ಯಾವುದೇ ಒಂದಾದರೂ ಜಾಗತಿಕ ಶಾಂತಿಯನ್ನು ಅಪಾಯಕ್ಕೆ ಸಿಲುಕಿಸಬಲ್ಲದು.

ಇಸ್ರೇಲ್ ಸರ್ಕಾರಕ್ಕೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸೈನಿಕ ನೆರವು ಧಾರಾಳವಾಗಿ ನೀಡುತ್ತಿದ್ದರೂ ಕೂಡ ಪ್ಯಾಲೆಸ್ತೀನ್ ವಿಮೋಚನಾ ಪಡೆಯನ್ನು ನಾಶಮಾಡಲು ಲೆಬನಾನಿನ ಮೇಲೆ ಯುದ್ಧ ಸಾರಲು ಇಸ್ರೇಲಿಗೆ ಧೈರ್ಯ ಸಾಲುತ್ತಿಲ್ಲ. ಪ್ಯಾಲೇಸ್ತೀನ್ ವಿಮೋಚನಾ ಪಡೆಗಳು ಲೆಬನಾನಿನ ರಾಷ್ಟ್ರೀಯವಾದಿ ಶಕ್ತಿಗಳ ಬೆಂಬಲ ಪಡೆದು ಧೀರ ಹೋರಾಟ ನಡೆಸಿವೆ, ಆದರೆ ಪ್ರತಿಗಾಮಿ ಅರಬ್ ಸರ್ಕಾರಗಳಿಂದಾಗಿ ಅದು ಬೈರೂತಿನಿಂದ ತನ್ನ ಸೇನೆಯನ್ನು ವಾಪಸು ಕರೆಸಿಕೊಂಡು ಹೊರಗಿನಿಂದ ಯುದ್ಧವನ್ನು ಮುಂದುವರಿಸಿದೆ. ಲೆಬನಾನಿನಲ್ಲಿ ಪರಿಸ್ಥಿತಿ ಇನ್ನೂ ಸ್ಫೋಟಕ ಹಂತದಲ್ಲಿದೆ ಇಸ್ರೇಲ್ ಆಡಳಿತಗಾರರು ಲೆಬನಾನಿನಿಂದ ಸಿರಿಯಾದ ಪಡೆಗಳು ಹಿಂದಿರುಗಬೇಕೆಂಬ ಬೇಡಿಕೆ ಮುಂದಿಟ್ಟಿರುವುದಷ್ಟೇ ಅಲ್ಲದೆ ಲೆಬನಾನಿನ ರಾಷ್ಟ್ರೀಯ ಪಡೆಗಳು ತಮ್ಮ ಸ್ವಂತ ರಾಜಧಾನಿಯಿಂದಲೇ ಹೊರಗೆ ಇರಬೇಕೆಂದು ಒತ್ತಾಯಿಸಿದೆ. ಮತ್ತು ಇಸ್ರೇಲಿನ ಕೈಗೊಂಬೆಯೊಬ್ಬ ಲೆಬನಾನಿನ ಅಧ್ಯಕ್ಷನಾಗಬೇಕೆಂದು ಸಂಚು ನಡೆಸಿದೆ.

ಈ ಹಿನ್ನೆಲೆಗಳ ವಿರುದ್ಧವಾಗಿ ಮತ್ತು ಹಿಂದೂ ಸಾಗರದಲ್ಲಿ ಜಮಾವಣೆಯಾಗುತ್ತಿರು ಅಮೇರಿಕನ್ ಸೇನೆ ಮತ್ತು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಆಗುತ್ತಿರುವುದಕ್ಕೆ ವಿರುದ್ಧವಾಗಿ ಭಾರತದಲ್ಲಾಗುತ್ತಿರುವ ಶಾಂತಿ ಚಳುವಳಿಯನ್ನು ವಿಮರ್ಶಿಸುತ್ತಾ ಕೇಂದ್ರ ಸಮಿತಿಯು ಪಕ್ಷದ ಎಲ್ಲಾ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಿಗೂ ಎಲ್ಲಾ ಶಾಂತಿ ಪ್ರೇಮಿಗಳಿಗೂ, ಅಕ್ಟೋಬರ್ 4ರಂದು ಆರು ಪಕ್ಷಗಳು ಕರೆನೀಡಿರುವ ದೆಹಲಿಯಲ್ಲಿ ನಡೆಯುವ ಶಾಂತಿಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಕರೆಕೊಟ್ಟಿದೆ.

ಐ. ಎಂ. ಎಫ್. ಸಾಲದ ಪರಿಣಾಮ

ದೇಶದ ಆಂತರಿಕ ಪರಿಸ್ಥಿತಿಗಳ ಬಗ್ಗೆ ವಿಮರ್ಶಿಸುತ್ತಾ ಕೇಂದ್ರ ಸಮಿತಿಯು ದಿನೇ ದಿನೇ ಹದಗೆಡುತ್ತಿರುವ ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಪರಿಶೀಲಿಸಿತು. ಅಗತ್ಯ ವಸ್ತುಗಳ ಬೆಲೆಗಳು ಸತತವಾಗಿ ಏರತೊಡಗಿವೆ. ಲೇ-ಆಫ್, ರಿಟ್ರೆಂಚ್‌ಮೆಂಟ್, ಬೀಗಮುದ್ರೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ. ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ 10,000 ಕೋಟಿ ರೂಪಾಯಿಗಳಷ್ಟು ಖೋತಾ ಉಂಟಾಗಿದೆ. ಯೋಜನೆಯು ತನ್ನ ಗುರಿಯನ್ನು ತಲುಪುವ ಸೂಚನೆಗಳೇ ಕಾಣದೆ ತೀರಾ ನಿರುತ್ಸಾಹಕರವಾಗಿದೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ತೆರಿಗೆಗಳನ್ನು ಹೆಚ್ಚಿಸುವ ಮೂಲಕ, ಸಾರಿಗೆ ವೆಚ್ಚವನ್ನು ಏರಿಸುವ ಮೂಲಕ, ವಿದ್ಯುತ್ ದರ, ನೀರಾವರಿ ತೆರಿಗೆ ಮುಂತಾದವುಗಳ ಮೂಲಕ ಹೆಚ್ಚು ಸಂಪನ್ಮೂಲಗಳನ್ನು ಪಡೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಸೂಚಿಸಿದೆ. ಸರ್ಕಾರದ ಈ ಕ್ರಮ ಈಗಾಗಲೇ ಬಡತನದಿಂದ ಬಗ್ಗಿ ಹೋಗಿರುವ ಜನ ಸಾಮಾನ್ಯರ ಬೆನ್ನುಗಳನ್ನು ಮುರಿಯುತ್ತವೆ. ವಿದೇಶೀ ಸಾಲದ ಹೊರೆ ದಿನೇ ದಿನೇ ಹೆಚ್ಚುತ್ತಿದೆ. ಅಮೇರಿಕದಿಂದ 25 ಲಕ್ಷ ಟನ್ನು ಗೋಧಿಯನ್ನು ಆಮದು ಮಾಡಿಕೊಳ್ಳಲಾಗಿದೆ ಪೆಟ್ರೋಲಿಯಂ ಉತ್ಪನ್ನಗಳ ಖರೀದಿ ಹಿಂದಿನ ಅಂದಾಜನ್ನು ಮೀರಿ ನಿಂತಿದೆ. I M. F. ಸೂಚಿಸಿರುವ ಪ್ರಕಾರ ಚಾಲ್ತಿಯಲ್ಲಿರುವ ಮೊತ್ತವು ಒಟ್ಟು ರಾಷ್ಟ್ರೀಯ ಉತ್ಪಾದನೆಯ ಶೇಖಡ 2.1 ಪ್ರಮಾಣಕ್ಕಿಂತಲೂ ಕಡಿಮೆಯಾಗದಂತೆ ಮಿತಗೊಳಿಸಲು ಸರ್ಕಾರದಿಂದ ಸಾಧ್ಯವಾಗುವುದಿಲ್ಲ. ಇದು I.M.F.ಗೆ ನಮ್ಮ ಅರ್ಥ ವ್ಯವಸ್ಥೆಯ ಮೇಲಿನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಲು ಅವಕಾಶ ಕಲ್ಪಿಸುತ್ತದೆ. ಎಲ್ಲ ಪರಿಸ್ಥಿತಿಗೂ ಸರ್ಕಾರವೇ ಸಂಪೂರ್ಣವಾಗಿ ಜವಾಬ್ದಾರಿಯೆಂದು ಕೇಂದ್ರ ಸಮಿತಿ ಅಭಿಪ್ರಾಯಪಡುತ್ತದೆ. ಏಕೆಂದರೆ ಸಾಲ ಪಡೆಯುವಾಗ ನಮ್ಮ ಸರ್ಕಾರ I.M.F. ಒಡ್ಡಿದ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡಿದ್ದರ ಪರಿಣಾಮವಾಗಿ, ಸಹಾಯಧನದಲ್ಲಿ ಕಡಿತ, ಆಮದು ನೀತಿಯಲ್ಲಿ ಉದಾರತೆ, ಸಾಲತಡೆ, ಸಾರ್ವಜನಿಕ ಕ್ಷೇತ್ರದ ಉದ್ಯಮ ಹಾಗೂ ಅಗತ್ಯ ಸೇವೆಗಳನ್ನು ಲಾಭಗಳಿಕೆಯ ಸಂಸ್ಥೆಗಳನ್ನಾಗಿಸುವುದು, ಗುತ್ತೇದಾರಿಗಳಿಗೆ ವಿನಾಯಿತಿ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅವಕಾಶ ಕಲ್ಪಿಸುವುದು ಮುಂತಾದ ಷರತ್ತುಗಳು ಆರ್ಥಿಕ ರಂಗದಲ್ಲಿ ಬಿಕ್ಕಟ್ಟನ್ನು ಹೆಚ್ಚಿಸುತ್ತಿದೆ.

(ಮುಂದುವರೆಯುವುದು)

ಎಸ್. ಎಫ್. ಐ. ಚಟುವಟಿಕೆಗಳು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿ ವಿಸ್ತೃತ ಸಭೆಯು ಸೆಪ್ಟೆಂಬರ್ 4 ರಂದು ಧಾರವಾಡದಲ್ಲಿ ಜರುಗಿತು. ಈ ಸಭೆಯಲ್ಲಿ ಅಖಿಲ ಭಾರತ ಅಧ್ಯಕ್ಷರಾದ ಎಂ. ಎ. ಬೇಬಿಯವರು ಉಪಸ್ಥಿತರಿದ್ದರು. ರಾಜ್ಯ ಸಮಿತಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳು ಈ ರೀತಿ ಇವೆ.

1. ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ನಡೆಯಲಿರುವ ಎಸ್.ಎಫ್.ಐ ನ ನಾಲ್ಕನೇ ರಾಜ್ಯ ಸಮ್ಮೇಳನದ ಅಂಗವಾಗಿ ಪದವಿ ಪೂರ್ವ ಮತ್ತು ಪದವಿ ಶಿಕ್ಷಣ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸಣ್ಣ ಕಥೆ, ಕವನ ಮತ್ತು ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

2. ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ವಿಭಾಗದ (ಬಿ. ಸಿ. ಎಂ.) ಹಾಸ್ಟೆಲ್‌ಗಳಲ್ಲಿ ಕ್ಯಾರಿ ಓವ್ಹರ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಮುಂದುವರಿಸಬೇಕೆಂದು ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನವನ್ನು 125 ರೂ.ಗಳಿಂದ 175 ರೂ.ಗಳಿಗೆ ಹೆಚ್ಚಿಸಬೇಕೆಂದು ರಾಜ್ಯ ಸಮಿತಿಯು ಒತ್ತಾಯಿಸಿದೆ.

ಈ ಬೇಡಿಕೆಗಳನ್ನು ಈಡೇರಿಸುವವರೆಗೆ ಸಮಾಜ ಕಲ್ಯಾಣ ಮಂತ್ರಿ ವೆಂಕಟರಮಣರವರಿಗೆ ರಾಜ್ಯದಾದ್ಯಂತ ಕಪ್ಪು ಭಾವುಟ ಪ್ರದರ್ಶಿಸಲಾಗುವುದು. ಹಾಗೂ ಬಿ.ಸಿ ಎಂ. ವಿದ್ಯಾರ್ಥಿಗಳ ಸಹಿ ಸಂಗ್ರಹ ಪಡೆದ ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಪ್ರತಿಭಟನಾ ಪ್ರದರ್ಶನ ನಡೆಸಲಾಗುವುದು.

ನಿರ್ಣಯಗಳು :

1. ಸಂಬಂಧಗಳು ಪುಸ್ತಕದ ಬದಲಿಗೆ ದ್ವಿತೀಯ ಪಿ ಯು.ಸಿ. ವಿದ್ಯಾರ್ಥಿಗಳಿಗೆ ಹೊಸ ಪಠ್ಯ ಪುಸ್ತಕ ತಕ್ಷಣ ಉಚಿತವಾಗಿ ಒದಗಿಸಬೇಕು.

2. ಪಿ. ಯು. ಸಿ. ಪರೀಕ್ಷೆಗಳಲ್ಲಿನ ಮಾರ್ಕ್ಸ್‌ಕಾರ್ಡ್ ಹಗರಣದ ಕುರಿತು ತನಿಖೆಯನ್ನು ಶೀಘ್ರದಲ್ಲೇ ಮುಗಿಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಲಾಗಿದೆ. ಖೋಟಾ ಅಂಕ ಪಟ್ಟಿಗಳನ್ನು ಪಡೆದಿರುವ ವಿದ್ಯಾರ್ಥಿಗಳ ಪೈಕಿ ಕೆಲವು ಶಾಸಕರ ಮತ್ತು ಮಂತ್ರಿಗಳ ಮಕ್ಕಳು ಸೇರಿರುವ ವರದಿ ಬಂದಿರುವುದರಿಂದ ಹಗರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯಬಹುದಾದ ಬಗ್ಗೆ ಸಾರ್ವಜನಿಕರು, ವಿದ್ಯಾರ್ಥಿಗಳು ಎಚ್ಚರದಿಂದಿದ್ದು ಈ ಪಿತೂರಿಯನ್ನು ಪ್ರತಿಭಟಿಸಬೇಕೆಂದು ರಾಜ್ಯ ಸಮಿತಿ ಕರೆ ನೀಡಿದೆ.

3. ಬಿ. ಇ ತರಗತಿಗಳಿಗೆ ಪ್ರವೇಶ ಪಡೆಯಲು ಅಭ್ಯರ್ಥಿಯು ಕನಿಷ್ಟ 5 ವರ್ಷಗಳ ಕಾಲ ಕರ್ನಾಟಕದಲ್ಲಿ ಶಿಕ್ಷಣ ಪಡೆದಿರಬೇಕೆಂಬ ಹೊಸ ನಿಯಮವನ್ನು ಎಸ್.ಎಫ್.ಐ. ವಿರೋಧಿಸಿದೆ. ಇದರಿಂದ ಬಿ. ಇ ಪ್ರವೇಶದ ಪೈಪೋಟಿಯನ್ನು ಕರ್ನಾಟಕದ ಶ್ರೀಮಂತ ವಿದ್ಯಾರ್ಥಿಗಳಿಗೆ ಮಿತಗೊಳಿಸಿದಂತಾಗುವುದಷ್ಟೆ. ಸರ್ಕಾರವು ಕ್ಯಾಪಿಟೇಷನ್ ಫೀ ಪದ್ಧತಿಯನ್ನು ರದ್ದುಮಾಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ಬದಲು ಈ ರೀತಿ ವಿದ್ಯಾರ್ಥಿಗಳನ್ನು ತಪ್ಪು ದಾರಿಗೆಳೆಯುವ ಕುತಂತ್ರವನ್ನು ಎಸ್. ಎಫ್. ಐ. ತೀವ್ರವಾಗಿ ಖಂಡಿಸುತ್ತದೆ.

ಪುತ್ತೂರು :

ಪುತ್ತೂರಿನಲ್ಲಿ ದಿನಾಂಕ 22-8-82 ರಂದು ಎಸ್. ಎಫ್. ಐ. ಸಭೆಯನ್ನು ಕರೆಯಲಾಗಿತ್ತು. ಸಭೆಗೆ ನೆಹರು ಮೆಮೋರಿಯಲ್ ಕಾಲೇಜು ಸುಳ್ಯ ಪ್ರಾಧ್ಯಾಪಕರಾದ ಶ್ರೀ ಪುರುಶೋತ್ತಮ ಬಿಳಿಮಲೆ ಅವರು ಮುಖ್ಯ ಅಥಿತಿಗಳಾಗಿ ಆಗಮಿಸಿದ್ದರು. ಕಾಂ| ನಿರಂಜನ ರಾವ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸುಮಾರು 125 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಭೆಯ ಕೊನೆಯಲ್ಲಿ ಪುತ್ತೂರು ಎಸ್.ಎಫ್.ಐ. ಶಾಖೆಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಪ್ರಸನ್ನಕುಮಾರ್ ಶೆಣೈ, ಉಪಾಧ್ಯಕ್ಷರಾಗಿ ಕೆ. ಶೀಲಾವತಿ, ಕಾರ್ಯದರ್ಶಿಯಾಗಿ ಸೋಮ, ಖಜಾಂಚಿಯಾಗಿ ಚಂದ್ರಶೇಖರ ಗೌಡ ಮತ್ತು 11 ಜನ ಸದಸ್ಯರನ್ನೊಳಗೊಂಡ ಸಮಿತಿ ಆಯ್ಕೆಗೊಂಡಿತು.

ಬೀದರ್ :

25-8-82 ರಂದು ಬೀದರಿನ ಫಸ್ಟ್ ಗ್ರೇಡ್ ಡಿಗ್ರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಭೆ ನಡೆದು ಕಾಲೇಜು ಸಮಿತಿಯನ್ನು ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಉಪ ಸಂಚಾಲಕ ಕಾಂ| ವೀರಶೆಟ್ಟಿ ಬಾವಣೆ ವಹಿಸಿದ್ದರು.

ಈ ಕೆಳಕಂಡವರನ್ನು ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಗಿದೆ :

ಅಧ್ಯಕ್ಷರಾಗಿ ಇಲಿಯಾಸ್, ಉಪಾಧ್ಯಕ್ಷರಾಗಿ ದೇವೆಂದ್ರ, ಲಕ್ಷ್ಮಣ ಮತ್ತು ಆಶಾಲತಾ, ಕಾರ್ಯದರ್ಶಿಯಾಗಿ ಅನಂತ ರೆಡ್ಡಿ, ಸಹಕಾರ್ಯದರ್ಶಿಗಳಾಗಿ ಶಿವರಾಜ, ನಾಗೇಂದ್ರ ಮತ್ತು ಪ್ರಕಾಶ, ಖಜಾಂಚಿಯಾಗಿ ನಿರ್ಮಲಕುಮಾರ್.

31-8-82 ರಂದು ಬೀದರಿನಲ್ಲಿ ಗ್ರಂಥಾಲಯದಲ್ಲಿ ಸದಸ್ಯತ್ವ ಪಡೆದವರಿಗೆ ಮಾತ್ರ ಓದುವ ಕೋಣೆಯಲ್ಲಿ ಅವಕಾಶಕೊಟ್ಟಿದ್ದನ್ನು ಪ್ರತಿಭಟಿಸಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜಿಲ್ಲಾ ಗ್ರಂಥಾಲಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ವಿದ್ಯಾರ್ಥಿಗಳ ಬೇಡಿಕೆಯನ್ನು ಒಪ್ಪಿಕೊಂಡ ಅಧಿಕಾರಿಯವರು ವಿದ್ಯಾರ್ಥಿಗಳಿಗೂ, ಸಾರ್ವಜನಿಕರಿಗೂ ಓದುವ ಅವಕಾಶ ಕಲ್ಪಿಸಿಕೊಟ್ಟಿರುವರು. ಅಲ್ಲದೇ ಕಾಲೇಜಿನ ಸಿಲಿಬಸ್ ಪಟ್ಟಿ ಒದಗಿಸಿದರೆ ಆ ಪುಸ್ತಕಗಳನ್ನೂ ತರಿಸುವ ವ್ಯವಸ್ಥೆ ಮಾಡುವ ವಾಗ್ದಾನ ಮಾಡಿದ್ದಾರೆ.

ಹೂವಿನ ಹಡಗಲಿ :

30-8-82 ರಂದು ಎಸ್.ಎಫ್. ಐ. ಸ್ಥಳೀಯ ಘಟಕದ ನೇತೃತ್ವದಲ್ಲಿ ವಿದ್ಯಾರ್ಥಿಗಳ ಸಭೆ ಜರುಗಿತು. ಆರಂಭದಲ್ಲಿ ಘಟಕದ ಅಧ್ಯಕ್ಷ ಎಸ್. ಮೆಹಬೂಬ್‌ಖಾನ್‌ರವರು ಸ್ವಾಗತ ಕೋರಿದರು.

ಜಿಲ್ಲಾ ಸಂಚಾಲಕಿ ಕೆ. ಶಾಂತಕುಮಾರಿಯವರು "ಸ್ವಾತಂತ್ರ್ಯ ಮತ್ತು ಶಿಕ್ಷಣ ಪದ್ಧತಿ" ಎಂಬ ವಿಷಯದ ಕುರಿತು ಮಾತನಾಡಿದರು.

2-9-82 ರಂದು ಎಸ್.ಎಫ್.ಐ. ಘಟಕವು ಸ್ಥಳೀಯ ಜಿ. ಬಿ. ಆರ್. ಕಾಲೇಜಿನಲ್ಲಿ ಭಾಷಣ ಸ್ಪರ್ಧೆಯನ್ನು ಮತ್ತು ಜನಪದಗೀತೆಗಳ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸಿತ್ತು. ಕಾಲೇಜಿನ ಬಹುಸಂಖ್ಯೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಈಶ್ವರಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ವಿಜೇತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ನಡೆಯಿತು.

ಸವದತ್ತಿ :

ಸ್ಥಳೀಯ ಎಸ್. ಎಫ್. ಐ. ಘಟಕವು 26-8-82 ರಂದು ಇಲ್ಲಿನ ಎಸ್. ಐ ಎಸ್.ಬಿ. ಮಹಾ ವಿದ್ಯಾಲಯದಲ್ಲಿ ಉಪನ್ಯಾಸ ಕಾರ್ಯಕ್ರಮವೊಂದನ್ನು ಏರ್ಪಡಿಸಿತ್ತು.

'ಉಚ್ಚ ಶಿಕ್ಷಣದಲ್ಲಿ ಕೆಲವು ಸಮಸ್ಯೆಗಳು' ಎಂಬ ವಿಷಯದ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮವನ್ನುದ್ದೇಶಿಸಿ ಡಾ|| ವಿ. ಎಸ್. ದೇಶಪಾಂಡೆ (ಕರ್ನಾಟಕ ವಿಶ್ವವಿದ್ಯಾಲಯ, ತತ್ವಶಾಸ್ತ್ರ ವಿಭಾಗ) ಅವರು ಮಾತನಾಡಿದರು. ಪ್ರಾಚಾರ್ಯ ಬಿ. ಚಂದ್ರಶೇಖರ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಕಾಂ| ಬಿ. ಎಸ್. ಕಳ್ಳಿಮನಿ ಸ್ವಾಗತಿಸಿದರು. ಕೊನೆಯಲ್ಲಿ ಎಸ್. ಎ. ಸೊನ್ನದ ವಂದಿಸಿದರು.

ಬೆಂಗಳೂರು :

13-9-82 ರಂದು ಸರಕಾರಿ ವಿಜ್ಞಾನ ಕಾಲೇಜಿನ ಘಟಕದ ಸಭೆ ಸೇರಿತ್ತು. ಕಾಂ| ಎಸ್. ರಾಜಣ್ಣ ಮತ್ತು ಕಾಂ| ಶಿವಶಂಕರ್ ಇವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀಧರಮೂರ್ತಿಯವರು ಸಂಚಾಲಕರಾಗುಳ್ಳ ಪುನರ್‌ರಚಿತ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಶೀಘ್ರದಲ್ಲೇ ಶಾಖಾ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

ನೂತನ ಘಟಕ :

ಮಲ್ಲೇಶ್ವರಂನ ಸರಕಾರಿ ಕಿರಿಯ ಕಾಲೇಜಿನಲ್ಲಿ ಎಸ್. ಎಫ್. ಐ. ಘಟಕವೊಂದನ್ನು ಪ್ರಾರಂಭಿಸಲಾಗಿದೆ. ಕಾಂ| ಶಿವಶಂಕರ್ ಅವರು ಎಸ್. ಎಫ್. ಐ. ಕಾರ್ಯಕ್ರಮದ ಕುರಿತು ವಿವರಣೆ ನೀಡಿದರು.

ನೂತನ ಘಟಕಕ್ಕೆ ಸಂಚಾಲಕರಾಗಿ ಕೃಷ್ಣಮೂರ್ತಿ ಮತ್ತು ಸಹಸಂಚಾಲಕರಾಗಿ ಎಸ್. ಕೃಷ್ಣಮೂರ್ತಿಯವರನ್ನು ಆಯ್ಕೆ ಮಾಡಲಾಗಿದೆ.

ಅಸ್ಸಾಂ :

ಆ. ೧೫ ರಂದು ಸಾಮ್ರಾಜ್ಯಶಾಹಿ ವಿರೋಧಿ ಮತ್ತು ರಾಷ್ಟ್ರೀಯ ಐಕ್ಯತಾ ದಿನ

ಎಸ್. ಎಫ್. ಐ. ಮತ್ತು ಡಿ.ವೈ. ಎಫ್.ಐ. ಗಳ ಜಂಟಿ ಕರೆಗನುಗುಣವಾಗಿ ಆಗಸ್ಟ್ 15 ರಂದು 'ಸಾಮ್ರಾಜ್ಯಶಾಹಿ ವಿರೋಧಿ ಮತ್ತು ರಾಷ್ಟ್ರೀಯ ಐಕ್ಯತಾ ದಿನ'ದ ಅಂಗವಾಗಿ ಅಸ್ಸಾಂ ಆಂದೋಲನಕಾರರ 'ಕರ್ಫ್ಯೂ' ಧಿಕ್ಕರಿಸಿ ರಾಜ್ಯದ ನಾನಾ ಭಾಗಗಳಲ್ಲಿ ಸಭೆ ಮೆರವಣಿಗೆಗಳು ನಡೆದವು.

ಗೌಹಾತಿ ನಗರದಲ್ಲಿ ಎರಡು ಭಾರೀ ಸಭೆಗಳು ನಡೆದವು. ವ್ಯಾಪಾರ ಕೇಂದ್ರವಾದ ತೀನ್‌ಸುಖಿಯಾ ನಗರದಲ್ಲಿ ಸಿ.ಪಿ ಐ. (ಎಂ) ನೇತೃತ್ವದಲ್ಲಿ ಪ್ರಚಾರದ ಬಹಿರಂಗ ಸಭೆ ನಡೆಯಿತು. ಕಾಮರೂಪ ಜಿಲ್ಲೆ, ಚಾಚಾರ್ ಜಿಲ್ಲೆ, ಗೋಪಾಲಪುರ ಜಿಲ್ಲೆ, ಡಾರ್‍ರಿಂಗ್ ಜಿಲ್ಲೆಯ ನಾನಾ ಭಾಗಗಳಲ್ಲಿ ಮತ ಪ್ರದರ್ಶನ, ಬಹಿರಂಗ ಸಭೆಗಳು ನಡೆದು ರಾಷ್ಟ್ರದ ಐಕ್ಯತೆಗೆ ಸಂಚಕಾರ ತಂದಿರುವ ಅಸ್ಸಾಂ ಚಳುವಳಿಯನ್ನು ಖಂಡಿಸಲಾಯಿತು. ಈ ಜನತಾ (!) ಚಳುವಳಿಯ ಹಿಂದಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ನಿಜರೂಪ ಕುರಿತು ಜನತೆಗೆ ತಿಳುವಳಿಕೆ ಕೊಡಲು ಪ್ರಯತ್ನ ನಡೆಯಿತು. ಈ ನೂರಾರು ಸಭೆ, ಮೆರವಣಿಗೆಗಳಲ್ಲಿ ಬಹು ಸಂಖ್ಯೆಯ ಜನತೆ ಭಾಗವಹಿಸಿದ್ದು 'ಅಸ್ಸಾಂ ಚಳುವಳಿ'ಯ ಗಂಡಾಂತರಕಾರಿ ನಿಲುವನ್ನು ಅರ್ಥಮಾಡಿಕೊಳ್ಳುತ್ತಿರುವುದರ ಸ್ಪಷ್ಟ ನಿದರ್ಶನ.

ಯುವ ಧುರೀಣನ ಕಗ್ಗೊಲೆ :

ಕಾಮರೂಪ ಜಿಲ್ಲೆಯ ಗೋರೆಶ್ವರ ಮತ್ತು ಇನ್ನೆರಡು ಜಾಗಗಳಲ್ಲಿ 'ಆಂದೋಲನಕಾರರು' ಸಭೆ - ಮೆರವಣಿಗೆಯ ಮೇಲೆ ಹಲ್ಲೆ ನಡೆಸಿದರು. ಈ ದಾಳಿಯಿಂದಾಗಿ ಡಿ.ವೈಎಫ್.ಐ. ಸ್ಥಳೀಯ ಘಟಕದ ಸಹ ಕಾರ್ಯದರ್ಶಿ ಗೌರಾಂಗ್ ಪಾಲ್ ಎಂಬ ಯುವಕ ಕಗ್ಗೊಲೆಗೀಡಾದರು. ಈ ಕಗ್ಗೊಲೆ ನಡೆಯುತ್ತಿರುವಾಗ ಕಾರ್ಯನಿರತ ನ್ಯಾಯಾಧೀಶರೂ ಅಲ್ಲಿಯೇ ಇದ್ದುದು ಮಾತ್ರವಲ್ಲ; ಕೊಲೆಪಾತಕಿಗಳು ತಮ್ಮ ಕಾರ್ಯ ಪೂರೈಸಿ ಸುರಕ್ಷಿತವಾಗಿ ತೆರಳಲು ಸ್ಥಳೀಯ ಪೋಲಿಸ್ ಅಧಿಕಾರಿ ಅನುವು ಮಾಡಿಕೊಟ್ಟರು.

ಅತ್ತ ಈ ಪೂರ್ವಯೋಜಿತ ಕೊಲೆ ನಡೆಯುತ್ತಿರುವಾಗ ಇತ್ತ ಬಜಾರ್‌ನಲ್ಲಿ ಅಲ್ಪ ಸಂಖ್ಯಾತರುಗಳಿಗೆ ಸೇರಿದ ಅಂಗಡಿಗಳ ಲೂಟಿ ನಡೆದಿತ್ತು. ಸಿ. ಪಿ. ಐ. (ಎಂ) ಸ್ಥಳೀಯ ಘಟಕದ ಕಚೇರಿಯನ್ನು ಧ್ವಂಸಗೊಳಿಸಲಾಯಿತು.

(೮ನೇ ಪುಟ ನೋಡಿ)

ಪರಿಸರ

● ಉತ್ತರ ಪ್ರದೇಶದಲ್ಲಿ ಪ್ರತಿವರ್ಷ ಪ್ರವಾಹ, ಬರಗಾಲದ ಪೀಡೆಗೆ ಒಳಗಾಗುವ ಪ್ರದೇಶಗಳು ಸರಿಯಾಗಿ ಗೊತ್ತಿದ್ದರೂ ಕೂಡಾ ಪ್ರತಿವರ್ಷ ಅದೇ ಪ್ರದೇಶಗಳಲ್ಲಿ ಮತ್ತೆ ಮತ್ತೆ ಇವು ಸಂಭವಿಸುತ್ತವೆ. ಹಾಗಿದ್ದರೆ ಪ್ರವಾಹ, ಬರಗಾಲದ ವಿರುದ್ಧ ಹೋರಾಡಲು ಖರ್ಚು ಮಾಡಲಾಗುತ್ತಿರುವ ಕೋಟ್ಯಾಂತರ ರೂಪಾಯಿಗಳ ಪ್ರಯೋಜನವಾದರೂ ಏನು? ಇದರಿಂದ ತಿಳಿಯುವುದೆಂದರೆ ಈ ಯೋಜನೆಗಳು ತಪ್ಪಾಗಿರಬೇಕು ಇಲ್ಲವೆ ಅವುಗಳ ಜಾರಿಯಲ್ಲಿ ತಪ್ಪಾಗಿರಬೇಕು.

— ಸ್ವತಂತ್ರ ಭಾರತ, ಲಕ್ನೋ

● ಕಾಂಗ್ರೆಸ್‌ನಲ್ಲಿ ಶಿಸ್ತು ಎನ್ನುವುದು ಎಲ್ಲಿದೆ? ಈ ಪಕ್ಷ ಹಾಳಾಗಿ ಹೋಗುತ್ತಿದೆ. ನಾನು ರಾಜಕೀಯವನ್ನೇ ತ್ಯಜಿಸಬೇಕೆಂದಿದ್ದೇನೆ.

— ಮಾಜಿ ಆಂಧ್ರ ಮುಖ್ಯ ಮಂತ್ರಿ ಅಂಜಯ್ಯ

● ಎಲ್ಲಾ ಕಾಂಗ್ರೆಸ್ ರಾಜ್ಯ ಮುಖ್ಯ ಮಂತ್ರಿಗಳು ಮತ್ತು ಭಿನ್ನಮತೀಯ ನಾಯಕರುಗಳಿಗೆ "ಪುನರ್‌ರಚನೆ" ಜ್ವರ ಬಂದುಬಿಟ್ಟಿದೆ. ಇದರಿಂದ ಆಡಳಿತ ಹೆಚ್ಚು ಕಡಿಮೆ ನಿಷ್ಕ್ರಿಯವಾಗಿದ್ದು, ಕೇಂದ್ರೀಯ ನಾಯಕರಿಗೂ ತಲೆನೋವಾಗಿದೆ.

ಇ.ಎಸ್.ಎಸ್. ಸೆ. ೧೭

ಸಣ್ಣ ಕಥೆ

ಪ್ರತಿಭಟನೆ

–ಚೆಖೊವ್

[ರಷ್ಯಾದ ಖ್ಯಾತ ಲೇಖಕರ ಕೆಲವು ಕಥೆಗಳನ್ನು ಅನುವಾದಿಸಿರುವ ಶ್ರೀ ಕೆ. ವಿ. ಉಪಾಧ್ಯಾಯ ಅವರ "ಕುರೂಪಿ ಗುಮಾಸ್ತ ಮತ್ತು ಇತರ ಕಥೆಗಳು" ಸಂಕಲನದಿಂದ ಆಯ್ದುದು.]

ನನ್ನ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ ಯೂಲಿಯಾ ವಾಸಿಲಿಯೋವನಾಳನ್ನು ನನ್ನ ಬೈಠಕ್ಕಿಗೆ (ವರಾಂಡ) ಬಂದು ಭೇಟಿಯಾಗುವಂತೆ ಹೇಳಿ ಕಳುಹಿಸಿದೆ. ಇವತ್ತು ಅವಳ ಲೆಕ್ಕ ಚುಕ್ತಾ ಮಾಡಬೇಕೆಂದಿದ್ದೆ.

"ಯೂಲಿಯಾ ವಾಸಿಲಿಯೋವನಾ, ಕುಳಿತುಕೋ. ನಿನ್ನ ಲೆಕ್ಕ ಚುಕ್ತಾ ಮಾಡಿಬಿಡುತ್ತೇನೆ. ನಿನಗೆ ಹಣದ ಅವಶ್ಯಕತೆಯಿದ್ದರೂ ದಾಕ್ಷಿಣ್ಯದಿಂದಾಗಿ ಕೇಳಿಲ್ಲವೆಂಬುದು ನನಗೆ ಗೊತ್ತು. ತಿಂಗಳಿಗೆ ಮೂವತ್ತು ರೂಬಲ್ ಕೊಡುವುದೆಂದು ನಿರ್ಣಯವಾಗಿತ್ತಲ್ಲವೇ ?"—ನಾನು ಕೇಳಿದೆ.

"ಮೂವತ್ತು ಅಲ್ಲ ನಲ್ವತ್ತು."

"ಅಲ್ಲ ಮೂವತ್ತು. ನನ್ನ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ನಾನು ಹಿಂದಿನಿಂದಲೂ ಮೂವತ್ತು ರೂಬಲ್ ಕೊಡುತ್ತಾ ಬಂದಿದ್ದೇನೆ. ಸರಿ ! ನೀನು ನಮ್ಮಲ್ಲಿ ಎರಡು ತಿಂಗಳು ಕೆಲಸ ಮಾಡಿದ್ದು ಸರಿಯೇ ?"

"ಎರಡು ತಿಂಗಳು ಮತ್ತು ಐದು ದಿನ."

"ಪೂರ್ಣ ಎರಡು ತಿಂಗಳು ಮಾತ್ರ. ನನ್ನ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ಈ ಎರಡು ತಿಂಗಳುಗಳಲ್ಲಿ ಬಂದ ಒಂಬತ್ತು ಭಾನುವಾರಗಳನ್ನು ಕಳೆ. ಭಾನುವಾರದಂದು ನೀನು ಕೋಲ್ಯಾನಿಗೆ ಕಲಿಸುತ್ತಿರಲಿಲ್ಲ ತಿರುಗಾಡಿಸಲು ಮಾತ್ರ ಕರೆಕೊಂಡು ಹೋಗುತ್ತಿದ್ದೆ. ಅದಲ್ಲದೇ ಮೂರು ದಿನ ರಜೆ ಇತ್ತು..."

ಯೂಲಿಯಾ ವಾಸಿಲಿಯೋವನಳ ಮುಖದಲ್ಲಿ ಚಿಂತೆ ಸ್ಪಷ್ಟವಾಗಿ ಕಾಣಿಸತೊಡಗಿತು. ಅವಳು ತನ್ನ ಬಟ್ಟೆಯನ್ನು ಬೆರಳುಗಳಲ್ಲಿ ಅವುಚಿ ಹಿಡಿದುಕೊಂಡಿದ್ದಳು. ಆದರೆ, ಒಂದೇ ಒಂದು ಶಬ್ದ ಅವಳ ಬಾಯಿಂದ ಹೊರಡಲಿಲ್ಲ.

"ಮೂರು ರಜಾ ದಿನಗಳು. ಒಂಬತ್ತು ಮತ್ತು ಮೂರನ್ನು ಕೂಡಿಸಿದರೆ ಹನ್ನೆರಡಾಯಿತು. ಆದ್ದರಿಂದ ಹನ್ನೆರಡು ರೂಬಲ್ ಕಮ್ಮಿ. ಕೋಲ್ಯಾ ನಾಲ್ಕು ದಿನ ಕಾಯಿಲೆಯಲ್ಲಿದ್ದ ಆಗ ನೀನು ಅವನಿಗೆ ಕಲಿಸಿರಲಿಲ್ಲ. ವಾನ್ಯಾನಿಗೆ ಮಾತ್ರ ಓದಿಸಿದ್ದೆ. ಮತ್ತೆ ಮೂರು ದಿನ ನೀನು ಹಲ್ಲು ನೋವಿನಿಂದ ನರಳುತಿದ್ದೆ. ಆಗ ನನ್ನ ಹೆಂಡತಿ ನಿನಗೆ ರಜೆ ಕೊಟ್ಟಿದ್ದಳು. ಹನ್ನೆರಡು ಮತ್ತು ಏಳು ಹತ್ತೊಂಬತ್ತಾಯಿತು. ಅದನ್ನು ಕಳೆದರೆ ಬಾಕಿ ಉಳಿಯುವುದು ನಲ್ವತ್ತೊಂದು ರೂಬಲ್ ಮಾತ್ರ. ಸರಿಯೇ ?"

ಯೂಲಿಯಾನ ಕಣ್ಣುಗಳಲ್ಲಿ ಕಂಬನಿ ಕಾಣಿಸಿಕೊಂಡಿತು. ಅವಳ ಕೆನ್ನೆಗಳು ನಡುಗತೊಡಗಿದವು. ಗಾಬರಿಯಿಂದಾಗಿ ಕೆಮ್ಮತೊಡಗಿದಳು. ನಂತರ ಮೂಗನ್ನು ಒರೆಸಿಕೊಂಡಳು. ಆದರೆ ಚಕಾರ ಎತ್ತಲಿಲ್ಲ.

"ಹೊಸ ವರ್ಷಾರಂಭದ ದಿನ ನೀನು ಒಂದು ಪ್ಲೇಟನ್ನು ಒಡೆದೆ. ಅದರ ಬಾಬ್ತು ಎರಡು ರೂಬಲ್ ಕಳೆ. ಅದರ ನಿಜವಾದ ಬೆಲೆ ತುಂಬ ಇದೆ. ಅದು ನಮ್ಮ ಹಿರಿಯರ ಸೊತ್ತು. ಒಳ್ಳೇದು ! ಅದನ್ನೆಲ್ಲ ಮರೆಯೋಣ. ಮತ್ತೊಂದು ವಿಷಯವೂ ಇದೆ. ನಿನ್ನ ಬೇಜವಾಬ್ದಾರಿಯಿಂದಾಗಿ ಕೋಲ್ಯಾ ಮರ ಹತ್ತಿ ಕೋಟನ್ನು ಹರಿದುಕೊಂಡ. ಅದರ ಬಾಬ್ತು ಹತ್ತು ರೂಬಲ್ ಕಳೆ. ನಿನ್ನ ನಿರ್ಲಕ್ಷ್ಯದಿಂದಾಗಿ ಕೆಲಸದವಳು ವಾನ್ಯಾನ ಬೂಟ್ಸು ಕದ್ದಳು. ನೀನು ಅವುಗಳ ಮೇಲೆ ನಿಗಾ ಇಡಬೇಕಿತ್ತು. ನಿನಗೆ ಕೈತುಂಬ ಸಂಬಳ ಕೊಡುತ್ತಿದ್ದೇನೆ. ಆದ್ದರಿಂದ ಬೂಟ್ಸುಗಳಿಗಾಗಿ ಐದು ರೂಬಲ್ ವಜಾ ಮಾಡುತ್ತೇನೆ. ಜನವರಿ ಹತ್ತನೇ ತಾರೀಖಿನಂದು ನನ್ನಿಂದ ಹತ್ತು ರೂಬಲ್ ಸಾಲ ಪಡೆದುಕೊಂಡಿದ್ದಿ."

"ಇಲ್ಲ. ನಾನು ತೆಗೆದುಕೊಳ್ಳಲಿಲ್ಲ"—ಯೂಲಿಯಾ ತುಟಿ ತೆರೆಯದೆಯೇ ಹೇಳಿದಳು.

"ಆದರೆ ನನ್ನ ಡೈರಿಯಲ್ಲಿ ಬರೆದಿದ್ದೇನೆ."

"ಹಾಗಾದರೆ ಸರಿ...ಬಹುಶಃ..."

"ನಲ್ವೊಂತ್ತೊಂದರಲ್ಲಿ ಇಪ್ಪತ್ತೇಳನ್ನು ಕಳೆ. ಹದಿನಾಲ್ಕು ರೂಬಲ್ ಉಳಿಯುವುದು."

ಯೂಲಿಯಾಳ ಕಣ್ಣುಗಳಲ್ಲಿ ಕಂಬನಿ ಉಕ್ಕಿ ಬಂತು. ಅವಳ ಚಿಕ್ಕದಾಗಿದ್ದ ತೆಳುವಾಗಿದ್ದ ಚಂದ ಮೂಗಿನಲ್ಲಿ ಬೆವರು ಮಿನುಗಿತು.

"ನಾನು ಒಂದೇ ಸಲ ಹಣ ತೆಗೆದುಕೊಂಡಿದ್ದೆ. ನಿಮ್ಮ ಹೆಂಡತಿಯಿಂದ ಮೂರು ರೂಬಲ್ ಪಡಕೊಂಡಿದ್ದೆ... ಅದಕ್ಕಿಂತ ಹೆಚ್ಚು ಎಂದೆಂದೂ ತೆಗೆದುಕೊಳ್ಳಲಿಲ್ಲ." ಕಂಪಿಸುತ್ತಿದ್ದ ಸ್ವರದಲ್ಲಿ ಆಕೆ ಎಂದಳು.

"ಸರಿ. ಅದನ್ನು ನಾನು ಡೈರಿಯಲ್ಲಿ ಬರೆದಿಡಲಿಲ್ಲ. ಹದಿನಾಲ್ಕರಿಂದ ಮೂರನ್ನು ಕಳೆ. ಈಗ ಹನ್ನೊಂದು ಉಳಿಯಿತು. ಇದು ನಿನ್ನ ಸಂಬಳ, ಮೂರು ಸಲ ಮೂರು, ಎರಡು ಸಲ ಒಂದು....ಜುಮ್ಲಾ ಹನ್ನೊಂದು. ಇದನ್ನು ಜಾಗ್ರತೆಯಿಂದ ಇಟ್ಟುಕೋ."

ನಾನು ಅವಳಿಗೆ ಹನ್ನೊಂದು ರೂಬಲ್ ಕೊಟ್ಟೆ. ನಡುಗುತ್ತಿದ್ದ ಬೆರಳುಗಳಿಂದ ಅದನ್ನು ಹಿಡಿದುಕೊಂಡಳು ಹಾಗೂ ತನ್ನ ಕಿಸೆಯಲ್ಲಿಟ್ಟುಬಿಟ್ಟಳು.

"ಧನ್ಯವಾದ !" ಅವಳು ಬಹಳ ನಿಧಾನವಾಗಿ ತುಟಿಗಳ ಒಳಗಿನಿಂದಲೇ ಹೇಳಿದಳು.

ನಾನು ಒಂದೇ ಸಮನೆ ಎದ್ದು ನಿಂತೆ. ಕೋಣೆಯಲ್ಲಿ ಅತ್ತಿತ್ತ ತಿರುಗಾಡಿದೆ. ನನಗೆ ಅಸಹನೀಯ ಕೋಪ ಬಂತು.

"ನೀನು ಧನ್ಯವಾದ ಯಾಕೆ ಹೇಳಿದೆ ?"

"ಹಣಕ್ಕಾಗಿ."

"ಧಿಕ್ಕಾರ ! ನಾನು ಮಾಡಿದ ಮೋಸ ನಿನಗೆ ತಿಳಿಯಲಿಲ್ಲವೇ ? ನಿನ್ನ ದುಡ್ಡನ್ನು ತಿಂದು ಹಾಕಿದ್ದೇನೆ. ಆದರೂ ನೀನು ಧನ್ಯವಾದ ಹೇಳುತ್ತಿರುವೆ !"

"ಬೇರೆ ಎಷ್ಟೋ ಕಡೆ ಜನರು, ಕೆಲಸ ಮಾಡಿದರೂ ಚಿಕ್ಕಾಸು ಕೊಡಲಿಲ್ಲ."

"ಏನೂ ಕೊಡಲಿಲ್ಲವೇ ? ಇದರಲ್ಲಿ ಆಶ್ಚರ್ಯದ ವಿಷಯವೇನಿದೆ ? ನಾನು ನಿನ್ನ ಪರೀಕ್ಷೆ ಮಾಡುತ್ತಿದ್ದೆ. ನಿನಗೆ ಎಂಬತ್ತು ರೂಬಲ್‌ಗಳನ್ನೇ ಕೊಡುತ್ತೇನೆ. ಈ ಲಕೋಟೆಯಲ್ಲಿ ಪೂರ್ಣ ಮೊತ್ತ ಇದೆ. ಇಷ್ಟು ನೀಚತನಕ್ಕಿಳಿಯಲು ಯಾರಿಂದಾದರೂ ಸಾಧ್ಯವಿದೆಯೇ ? ನೀನು ಯಾಕೆ ಪ್ರತಿಭಟಿಸಲಿಲ್ಲ ! ಬಾಯಿ ಮುಚ್ಚಿ ಯಾಕೆ ಕುಳಿತೆ ? ನೀನೇಕೆ ಇಷ್ಟು ಅಸಹಾಯಕಳಾಗಿದ್ದೀ ?"

ಅವಳ ತುಟಿಗಳಲ್ಲಿ ಸ್ವಲ್ಪ ಮಂದಹಾಸ ಮೂಡಿಬಂತು. 'ಹೌದು ಅದು ಸಾಧ್ಯವಿದೆ' ಎಂಬ ಭಾವನೆಯನ್ನು ಅವಳ ಮುಖದಲ್ಲಿ ಓದಿದೆ.

ಸುಮ್ಮನೆ ಅವಳಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಕ್ಷಮೆ ಕೇಳಿದೆ ಎಂಬತ್ತು ರೂಬಲ್ ಕೊಟ್ಟಾಗ ಅವಳಿಗೆ ಅಚ್ಚರಿಯಾಯಿತು. ನಂತರ ಎಷ್ಟೋ ಬಾರಿ ಧನ್ಯವಾದ ಹೇಳಿ ಅವಳು ಅಲ್ಲಿಂದ ಹೊರಟು ಹೋದಳು. ಅವಳನ್ನು ನೋಡುತ್ತಿದ್ದಂತೇ, ಈ ಪ್ರಪಂಚದಲ್ಲಿ ಗಣ್ಯ ವ್ಯಕ್ತಿಯಾಗುವುದು ಎಷ್ಟೊಂದು ಸುಲಭವಾಗಿದೆಯೆಂಬುದನ್ನು ಯೋಚಿಸಿದೆ.

●

ಇನ್ನಾದರೂ ಕಣ್ತೆರೆಯಲಿ

–ಶಂಕರ ನಾರಾಯಣರಾವ್ (ಪಾವಗಡ)

ಮಳೆ ಸಕಾಲಕ್ಕೆ ಬೀಳದೆ ಭೂಮಿ ಒಣಗಿ ಹೋಗಿ ರೈತ ಬಿತ್ತಿದ ಬೀಜಗಳು ಹಾಳಾಗಿ ಹೋಗಿರುವ ಪರಿಸ್ಥಿತಿ ರಾಜ್ಯದಾದ್ಯಂತ ಕಂಡು ಬರುತ್ತಿದೆ. ದನಕರುಗಳಿಗೆ ಮೇವಿಲ್ಲ; ಜನರಿಗೆ ಕುಡಿಯಲು ನೀರಿಲ್ಲ; ತಿನ್ನಲು ಏನೂ ಇಲ್ಲದೇ ಅಲೆಮಾರಿಗಳಾಗಬೇಕಾದ ಭೀಕರ ಪರಿಸ್ಥಿತಿ ಬಂದೊದಗಿದೆ.

ಮಳೆ ಇಲ್ಲದ ಅಭಾವ ಪೀಡಿತ ಪ್ರದೇಶಗಳಿಗಾಲಿ, ನೆರೆ ಹಾವಳಿ ಪೀಡಿತ ಪ್ರದೇಶಗಳಿಗಾಗಲಿ ಸರಕಾರ ಶಾಶ್ವತ ಪರಿಹಾರ ಒದಗಿಸುತ್ತಿಲ್ಲ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಮಾತ್ರ ಅಲ್ಪ ಸ್ವಲ್ಪ ತೇಪೆ ಹಚ್ಚುವ ಕೆಲಸ ನಡೆಯುತ್ತಿದ್ದು, ಸರಕಾರದ ಈ ಪ್ರವೃತ್ತಿಯಿಂದಾಗಿ ಸಹಸ್ರಾರು ಜನ ಸತ್ತು, ಲಕ್ಷಾವಧಿ ರೂ. ಬೆಲೆಬಾಳುವ ಸೊತ್ತು ನಾಶವಾದುದನ್ನು ಇತ್ತೀಚೆಗೆ ತಾನೇ ಉತ್ತರ ಪ್ರದೇಶ, ಓರಿಸ್ಸಾ, ಬಿಹಾರ ಮತ್ತು ನಮ್ಮ ರಾಜ್ಯದ ಕೆಲವು ಪ್ರದೇಶದಲ್ಲಿ ನಡೆದ ಭೀಕರ ನೆರೆಹಾವಳಿಯ ಸಂದರ್ಭದಲ್ಲಿ ಕಂಡಿದ್ದೇವೆ. ಸೂಕ್ತ ಯೋಜನೆ ಕೈಗೊಂಡು ಬರಗಾಲ ಪೀಡಿತ ಪ್ರದೇಶಗಳಿಗೆ ನೀರಾವರಿ ಸೌಕರ್ಯ ಒದಗಿಸುವ ಕ್ರಮಕೈಗೊಂಡರೆ ಈ ಪ್ರದೇಶಗಳ ಜನರಿಗೆ ಸ್ವಲ್ಪವಾದರೂ ನೆಮ್ಮದಿ ಸಿಕ್ಕೀತು.

ಮಳೆ ಇಲ್ಲದೆ ಅಭಾವದ ದವಡೆಗೆ ಸಿಕ್ಕಿರುವ ಅನೇಕ ತಾಲ್ಲೂಕುಗಳು ತುಮಕೂರು, ಚಿತ್ರದುರ್ಗ ಹಾಗೂ ಕೋಲಾರ ಜಿಲ್ಲೆಗಳಲ್ಲಿವೆ. ಮಳೆ ಬೀಳದಿರುವುದರಿಂದ ಜನತೆ ತತ್ತರಿಸಿದೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಉತ್ತರಪೆನ್ನಾರ ನದಿ ಪ್ರತ್ಯೇಕಿಸಿರುವ ತಿರುಮಣಿ ಸರ್ಕಲ್ ಇದೆ. ಬೇರೆ ಕಡೆಗಳಲ್ಲಿ ಅಭಾವವನ್ನು ಎದುರಿಸಲು ಸಹಕಾರಿಯಾದ ತೆಂಗು, ಮಾವು, ಅಡಿಕೆ, ಹುಣಿಸೆ ಮುಂತಾದ ಧೃವ ಬೆಳೆಗಳೂ ಇಲ್ಲ. ನೆಲಗಡಲೆಯೇ ಇಲ್ಲಿನ ಜೀವನ ಸಂಪತ್ತು.

ಭಾವಿತೋಡಿ ನೀರಾವರಿಗಳಾಗಿ ಪರಿವರ್ತಿಸಿಕೊಳ್ಳಲು ಬ್ಯಾಂಕ್‌ಗಳಿಂದ ಸಾಲ ತಂದು ಭಾವಿ ತೋಡಿಸಿದವರ ಅವಸ್ಥೆ ಶೋಚನೀಯ. ಭಾವಿ ತಳ ಕಾಣಿಸದಷ್ಟು ಆಳ, ತೋಡಿದಷ್ಟು ಬಂಡೆ, ಅಕಸ್ಮಾತ್ ನೀರು ಕಂಡರೆ ಬೆಳೆಗೆ ಅಯೋಗ್ಯವಾದ ಚೌಳು ನೀರು. ಇಷ್ಟೆಲ್ಲಾ ಆಗುವ ಹೊತ್ತಿಗೆ ಸಾಲದ ತಗಾದೆ.

ಎಂದಿನ ವರ್ಷದಂತೆ ಈ ಸಾರಿಯೂ ಮುಂಗಾರು ಮಳೆ ಬೀಳಲಿಲ್ಲ. ಆದರೂ ಮಳೆ ಬಂದೀತೆಂಬ ಭರವಸೆಯಿಂದ ಒಣ ನೆಲವನ್ನು ಉತ್ತು ಬಿತ್ತರು. ಜುಲೈ 8 ರಂದು ಮಳೆ ಬಂದಿತು. ದುಬಾರಿ ಬೆಲೆಯ ಬೀಜ – ರಸಗೊಬ್ಬರಗಳನ್ನು ಉಪಯೋಗಿಸಿ ಬಿತ್ತನೆ ಕೆಲಸವನ್ನು ರೈತಾಪಿ ಜನ ಪೂರೈಸಿತು.

ಮುಂದೆ ಮಳೆ ಬಾರದೆ ಕಾತರ ಹೆಚ್ಚಾಯಿತು. ಶೇ. 40ರಷ್ಟು ಬೀಜಗಳು ಮೊಳಕೆಯೇ ಕಾಣದ್ಷೆ ಸತ್ತು ಹೋದವು. ಬಿತ್ತಿ 50 ದಿನಗಳಾದರೂ ಮಳೆ ಬೀಳಲಿಲ್ಲ ಇನ್ನು ಮಳೆ ಬಂದರೆ ದನಗಳಿಗೆ ಮೇವಾದರೂ ಆದೀತೆಂಬ ಆಸೆ ಮಾತ್ರ ರೈತರಿಗೆ ಉಳಿದಿದೆ.

ಇಂಥಾ ಒಂದೊಂದು ಆಘಾತಕ್ಕೂ ನಾಲ್ಕು ವರ್ಷಗಳಾದರೂ ಚೇತರಿಸಿಕೊಳ್ಳುವಂತಿಲ್ಲ. ಈ ಭೀಕರ ಪರಿಸ್ಥಿತಿಯಿಂದಾಗಿ ವಲಸೆ ಹೋದವರೂ ಬೇಕಾದಷ್ಟು ಜನ. ಸಾಲದ ಭಾದೆಗಳಿಗೆ ನೇಣು ಹಾಕಿಕೊಂಡ ಘಟನೆಗಳೂ ನಡೆದುದುಂಟು.

ಈ ಮೂರು ಜಿಲ್ಲೆ (ತುಮಕೂರು, ಚಿತ್ರದುರ್ಗ ಹಾಗೂ ಕೋಲಾರ)ಗಳನ್ನು ಒಂದು ಗುಂಪಾಗಿ ಸೇರಿಸಿ (ಇಂಥಾ ಪ್ರದೇಶಗಳನ್ನು ಅಲ್ಲಲ್ಲಿ) ಒಂದು ಬೋರ್ಡ್ ನೇಮಿಸುವುದು ಅತ್ಯಂತ ಅವಶ್ಯಕ. (ಆಂದ್ರ ಪ್ರದೇಶದ 'ರಾಯಲಸೀಮೆ ಅಭಿವೃದ್ಧಿ ಯೋಜನೆ' ತರಹ). ಶಾಶ್ವತ ಪರಿಹಾರದ ಯೋಜನೆ ತಳಹದಿಯಲ್ಲಿ ತಾತ್ಕಾಲಿಕ ಪರಿಹಾರಗಳನ್ನು ಸರಕಾರ ಕೈಗೊಳ್ಳುವುದು ಸಕಾಲಿಕ ಕ್ರಮವಾದೀತು. ಸರಕಾರದ ಕಣ್ತೆರೆಸಲು ಎಲ್ಲ ಪಕ್ಷಗಳ ಪ್ರತಿನಿಧಿಗಳೂ, ಸಂಘ–ಸಂಸ್ಥೆಗಳೂ ಪ್ರಯತ್ನಿಸಲಿ.

●

ಕುಂದಾಪುರ :

ರಿಕ್ಷಾ ಚಾಲಕರ ಸಂಘದ ಚುನಾವಣೆ

ದಕ್ಷಿಣ ಕನ್ನಡ ಜಿಲ್ಲಾ ರಿಕ್ಷಾ ಚಾಲಕರ ಸಂಘದ ಕುಂದಾಪುರ ತಾಲ್ಲೂಕು ಘಟಕದ ವಾರ್ಷಿಕ ಮಹಾಸಭೆಯು ದಿನಾಂಕ 7-9-82 ರಂದು ಜರುಗಿತು. ಕುಂದಾಪುರ ಕೆಲಸಗಾರರ ಸಂಘದ ಅಧ್ಯಕ್ಷ ಕಾಂ| ಅಬ್ರಹಾಂ ಕರ್ಕಡ ಇವರು ಮುಖ್ಯ ಅತಿಥಿಗಳಾಗಿ ಸಭೆಯಲ್ಲಿ ಭಾಗವಹಿಸಿದ್ದರು.

1982–83ನೇ ಸಾಲಿಗೆ 17 ಮಂದಿ ಸಧಸ್ಯರನ್ನೊಳಗೊಂಡ ಕಾರ್ಯಕಾರೀ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾಂ| ಕರುಣಾಕರ ಅಧ್ಯಕ್ಷರಾಗಿ ಪುನರಾಯ್ಕೆಗೊಂಡಿದ್ದಾರೆ. ಬಸವ ಕಂದಾವರ (ಉಪಾಧ್ಯಾಕ್ಷ), ವಿ. ಗೋಪಾಲ ಬೆಟ್ಟಾಗರ (ಕಾರ್ಯದರ್ಶಿ),

(7ನೇ ಪುಟ ನೋಡಿ)

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ನಿರ್ಣಯಗಳು

ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳಿಗಾಗಿ ಹೋರಾಟ ನಡೆಯಲಿ

ಸಿ.ಪಿ.ಐ. (ಎಂ) ನ ಕರ್ನಾಟಕ ರಾಜ್ಯ ಸಮಿತಿಯ ಸಭೆ ಸೆಪ್ಟೆಂಬರ್, 8-9 ರಂದು ಬೆಂಗಳೂರಿನಲ್ಲಿ ಸೇರಿ ರಾಜ್ಯದಲ್ಲಿಯ ರಾಜಕೀಯ ಪರಿಸ್ಥಿತಿ, ಸಂಘಟನಾ ಸಮಸ್ಯೆಗಳು, ಪಾರ್ಟಿಯ ಪತ್ರಿಕೆ, ಸಾರ್ವಜನಿಕ ಚಟುವಟಿಕೆಗಳ ಕುರಿತು ಚರ್ಚೆ ಮಾಡಲಾಯಿತು. ಈ ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ| ಇ. ಎಂ. ಎಸ್. ನಂಬೂದಿರಿಪಾದ್, ಪೊಲಿಟ್‌ಬ್ಯೂರೋ ಸದಸ್ಯ ಕಾಂ| ಬಿ.ಟಿ.ರಣದಿವೆ ಹಾಗೂ ಕೇಂದ್ರ ಸಮಿತಿ ಸದಸ್ಯ ಕಾಂ| ಎಂ.ಆರ್. ವೆಂಕಟ್ರಾಮನ್ ಅವರುಗಳು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಕಾಂ| ನಂಬೂದಿರಿಪಾದ್ ಅವರು ಪಾರ್ಟಿಯ ಕೇಂದ್ರ ಸಮಿತಿಯ ರಾಜಕೀಯ ನಿರ್ಣಯವನ್ನು ವಿವರಿಸಿ ಹೇಳಿ, ಅದರ ಆಧಾರದಲ್ಲಿ ಕರ್ನಾಟಕದಲ್ಲಿಯೂ ಜನತೆಯ ಚಳುವಳಿಗಳ ಮೂಲಕ ಪಾರ್ಟಿ ಸಂಘಟನೆಯನ್ನು ಬೆಳೆಸಬೇಕೆಂದು ಹೇಳಿದರು. ರಾಜ್ಯ ಸಮಿತಿ ಕೆಲವು ಮುಖ್ಯ ನಿರ್ಣಯಗಳನ್ನು ಕೈಗೊಂಡಿದ್ದು, ಅವುಗಳ ಸಾರಾಂಶ ಕೆಳಗೆ ಕೊಡಲಾಗಿದೆ.

ಅಕ್ಟೋಬರ್ ೪ ರಂದು ಶಾಂತಿ ರ್‍ಯಾಲಿ

ಸಿ.ಪಿ.ಐ.(ಎಂ), ಸಿ.ಪಿ.ಐ, ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್., ಡಿ.ಎಸ್.ಪಿ., ಶೇತಕರಿ ಕಾಮಗಾರ ಪಕ್ಷಗಳು ಸೇರಿ ಅಕ್ಟೋಬರ್ 4 ರಂದು ನವದೆಹಲಿಯಲ್ಲಿ ಅಖಿಲ ಭಾರತ ಮಟ್ಟದ ಬೃಹತ್ ಪ್ರದರ್ಶನವನ್ನು ನಡೆಸಿ ಯುದ್ಧದ ಅಪಾಯವನ್ನು ಪ್ರತಿಭಟಿಸಲು ತೀರ್ಮಾನಿಸಿವೆ (ಇದರ ವಿವರ ಈಗಾಗಲ್ಲೇ ಐಕ್ಯರಂಗದಲ್ಲಿ ಪ್ರಕಟವಾಗಿದೆ). ಅಮೇರಿಕದ ಸಾಮ್ರಾಜ್ಯಶಾಹಿಯು ಜಗತ್ತನ್ನು ಅಣು ಯುದ್ಧದ ಅಂಚಿಗೆ ತರುತ್ತಿದ್ದು ಇಂದು ಮಾನವ ಕುಲವೇ ನಾಶವಾಗುವ ಅಪಾಯವಿದೆ. ಇಂಥಹ ಪರಿಸ್ಥಿತಿಯಲ್ಲಿ, ಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಹೋರಾಡುವ ನಮ್ಮ ಪಕ್ಷದ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಭಾರತ ದೇಶದ ಜನತೆಯನ್ನು ಎಚ್ಚರಿಸಿ ತಿಳುವಳಿಕೆ ನೀಡಿ, ಸಂಘಟಿಸಿ ಯುದ್ಧದ ಅಪಾಯದ ವಿರುದ್ಧ ಪ್ರತಿಭಟಿಸಿ, ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ "ಯುದ್ಧ ವಿರೋಧಿ ಮತ್ತು ಶಾಂತಿಗಾಗಿ" ಹೋರಾಟದೊಂದಿಗೆ ನಮ್ಮನ್ನು ಸೇರಿಸಿಕೊಂಡು, ಸಾಮ್ರಾಜ್ಯಶಾಹಿ ವಿರೋಧ್ಧದ ಹೋರಾಟವನ್ನು ಬಲಗೊಳಿಸಬೇಕಾಗಿದೆ.

ನವದೆಹಲಿಯಲ್ಲಿ ಅಕ್ಟೋಬರ್ 4 ರಂದು ನಡೆಯುವ ರ್‍ಯಾಲಿಗೆ ನಮ್ಮ ರಾಜ್ಯದಿಂದ 25 ಜನರನ್ನು ಕಳುಹಿಸಲು ತೀರ್ಮಾನವಾಗಿದೆ.

ದಿಲ್ಲಿ ಮತ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 4ರ ವರೆಗೆ ಎಲ್ಲ ಜಿಲ್ಲೆ, ತಾಲ್ಲೂಕು ಮಟ್ಟದಲ್ಲೆಲ್ಲ ಮೆರವಣಿಗೆ, ಸಭೆ, ವಿಚಾರಗೋಷ್ಠಿ ಕಾರ್ಯಕ್ರಮಗಳನ್ನು ನಡೆಸಿ, ಅಕ್ಟೋಬರ್ 4 ರಂದು ಬೆಂಗಳೂರು, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ ಈ ಕೇಂದ್ರಗಳಲ್ಲಿ ಪ್ರಾದೇಶಿಕ ಮಟ್ಟದ ಬೃಹತ್ ರ್‍ಯಾಲಿಗಳನ್ನೇರ್ಪಡಿಸಬೇಕೆಂದು ನಿರ್ಣಯಿಸಿದೆ.

ರಾಜಕೀಯ ಸಮ್ಮೇಳನಗಳು

ಪಕ್ಷದ ಧೋರಣೆಯನ್ನು ಜನತೆಯ ಮಧ್ಯೆ ಕೊಂಡೊಯ್ಯಲು ಮತ್ತು ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ನಮ್ಮ ನಿಲುವೆಯನ್ನು ವಿವರಿಸಲು ನವಂಬರ್ 15 ರಿಂದ ಅದೇ ತಿಂಗಳ ಕೊನೆಯವರೆಗೆ ಬೇರೆ ಬೇರೆ ಜಿಲ್ಲೆಗಳಲ್ಲಿ "ಪಕ್ಷದ ರಾಜಕೀಯ ಸಮ್ಮೇಳನ"ಗಳನ್ನು ನಡೆಸಬೇಕೆಂದೂ ನಿರ್ಣಯಿಸಲಾಯಿತು.

ಪಕ್ಷದ ಶಾಲೆ

ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ವಿಚಾರಗಳ ಕುರಿತು ರಾಜ್ಯ ಮಟ್ಟದ ಪಕ್ಷದ ಶಾಲೆಯನ್ನು ಡಿಸೆಂಬರ್ 16 ರಿಂದ 25 ರವರೆಗೆ ಬೆಂಗಳೂರಲ್ಲಿ ನಡೆಸಬೇಕೆಂದೂ, ಹಾಗೆಯೇ ನವಂಬರ್ ಮೊದಲವಾರ ಮಂಗಳೂರಿನಲ್ಲಿ 5 ದಿವಸದ ಸಮರಶೀಲ ಕಾರ್ಮಿಕ ಕಾರ್ಯಕರ್ತರಿಗೆ ಶಾಲೆ ನಡೆಸಬೇಕೆಂದೂ ನಿರ್ಣಯಿಸಲಾಯಿತು.

ಚುನಾವಣೆ

ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸುವ ದೃಷ್ಟಿಯಲ್ಲಿ ನಮ್ಮ ಪಾರ್ಟಿಯ ನಿಲುವೆಯಾಗಿರಬೇಕೆಂದೂ ನಿರ್ಣಯಿಸಲಾಯಿತು. ಮಳೆಯ ಅಭಾವದಿಂದಾಗಿ ರಾಜ್ಯದ ಹೆಚ್ಚಿನ ಪ್ರದೇಶ ಭೀಕರ ಬರಗಾಲದ ದವಡೆಗೆ ಸಿಕ್ಕಿಕೊಂಡಿದ್ದು ಆ ಪ್ರದೇಶಗಳಲ್ಲಿ ರೈತರ ಸಂಘಟನೆ ಮಾಡಿ ರೈತರಿಗೆ ಸಹಾಯ ಸಿಗುವಂತೆ, ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವಂತೆ ಸರಕಾರದ ಮೇಲೆ ಒತ್ತಾಯ ತರಲು ಸಂಯುಕ್ತ ಹೋರಾಟ ನಡೆಸಬೇಕೆಂದೂ, ಹಾಗೆಯೇ ಮಂಗಳೂರು, ಕಾರವಾರ, ಶಿವಮೊಗ್ಗ ಮೊದಲಾದದೆಡೆ ಅಪಾರ ಮಳೆಯಿಂದಾಗಿ ಜನರಿಗೆ ಬಹಳ ಹಾನಿಯಾಗಿದ್ದು ಅವರಿಗೆ ಪರಿಹಾರ ಸಿಗುವಂತೆ ಕಾರ್ಯ ನಡೆಸಬೇಕೆಂದೂ ಕರೆ ಕೊಡಲಾಯಿತು.

ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಎಲ್ಲಾ ಪಾರ್ಟಿ ಘಟಕಗಳೂ ಆಸ್ಥೆಯಿಂದ ದುಡಿಯಬೇಕೆಂದೂ ಪಾರ್ಟಿ ರಾಜ್ಯ ಸಮಿತಿ ವಿನಂತಿಸುತ್ತದೆ.

●

ರಾಯಚೂರು:

ವಿಚಾರ ಸಂಕಿರಣ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರೆಯ ಮೇರೆಗೆ, ರಾಯಚೂರು ಘಟಕವು ಇತರ ಎಲ್ಲಾ ಮಹಿಳಾ ಸಂಘಟನೆಗಳನ್ನು ಸೇರಿಸಿ ರಚಿಸಿದ ಮಹಿಳಾ ಸಮನ್ವಯ ಸಮಿತಿಯ ಮೂಲಕ 4-9-82 ರಂದು 'ದುಡಿಯುವ ಮಹಿಳೆಯರ ದಿನ'ವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ 'ಮಹಿಳೆ ಮತ್ತು ಉದ್ಯೋಗ' ಹಾಗೂ 'ಮಹಿಳೆಗೆ ಉದ್ಯೋಗ ಅಗತ್ಯವೇ ?' ಎಂಬ ವಿಷಯಗಳ ಮೇಲೆ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪಾಪಿಕುಮಾರ್ (ಜಿಲ್ಲಾಧಿಕಾರಿಯವರ ಪತ್ನಿ) ಆಗಮಿಸಿದ್ದರು. ಅವರು ಸಭೆಯನ್ನುದ್ದೇಶಿ ಮಾತನಾಡುತ್ತಾ, ಆರ್ಥಿಕವಾಗಿ ಅವಲಂಬಿತರಾಗಿರದ ಅಂದರೆ ಉದ್ಯೋಗ ಹೊಂದಿದ ಮಹಿಳೆಯರು ತಮ್ಮ ಸ್ವಂತ ವ್ಯಕ್ತಿತ್ವ ರೂಪಿಸಿಕೊಳ್ಳಬಲ್ಲರು. ಕಾರಣ ವ್ಯಕ್ತಿತ್ವ ವಿಕಾಸಕ್ಕೆ ಎಲ್ಲ ಮಹಿಳೆಯರೂ ಉದ್ಯೋಗ ಪಡೆಯುವುದು ಅವಶ್ಯಕ ಎಂದರು.

ಸಭೆಗೆ ಭಾಷಣಕಾರರಾಗಿ ಆಗಮಿಸಿದ ಶ್ರೀಮತಿ ಬಿ. ಟಿ. ಲಲಿತಾ ನಾಯಕ್, ಮೀನಾಕ್ಷಿ, ಪದ್ಮಾ, ಶ್ರೀದೇವಿ ಹವಳೆ, ಚಂದ್ರಿಕಾ, ಹಂಪಮ್ಮಾ ಹುಲಿಗೆಮ್ಮಾ ಇವರುಗಳು ಮಾತನಾಡುತ್ತಾ, ಮಹಿಳೆಗೆ 'ದೇವತೆ' ಸ್ಥಾನವೊಂದನ್ನು ಬಿಟ್ಟು ಬೇರಾವ ಮಾನವೀಯ ಸೌಲಭ್ಯಗಳೂ ಇಲ್ಲ; ಅವಳನ್ನು ಆರ್ಥಿಕ, ಸಾಮಾಜಿಕ ಹಾಗೂ ಇತರೆಲ್ಲ ಕ್ಷೇತ್ರಗಳಿಂದ ದೂರವಿರಿಸಲಾಗಿದೆ ಎಂದರು. ಈ ಅಸಮಾನತೆಯ ವಿರುದ್ಧ ಹೋರಾಟ ಅತ್ಯವಶ್ಯ ಎಂದು ಭಾಷಣಕಾರರು ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಹರಿಣಿ ಕಕ್ಕೇರಿ ವಹಿಸಿದ್ದರು. ಆರಂಭದಲ್ಲಿ ಸಂಘಟನೆಯ ಕಾರ್ಯಕರ್ತೆಯರಿಂದ ಹಾಡಿನ ಕಾರ್ಯಕ್ರಮ ನಡೆಯಿತು. ಶ್ರೀಮತಿ ಶ್ಯಾಮಲಾ ಅವರು ಮಾತನಾಡುತ್ತಾ ಸಂಘಟನೆಯ ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು ಕೊನೆಯಲ್ಲಿ ಶ್ರೀಮತಿ ಸುಲೋಚನಾ ವಂದಿಸಿದರು.

ಸಮನ್ವಯ ಸಮಿತಿಯ ಪ್ರತಿನಿಧಿಗಳು ಮಹಿಳೆಯರ ಸಮಸ್ಯೆಗಳನ್ನು ಕುರಿತು ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಿದರು. ರಾಯಚೂರಿನ ದೊಡ್ಡ ಕೊಳಚೆ ಪ್ರದೇಶ ನೀರುಭಾವಿಕುಂಟಾದಲ್ಲಿ ಶಾಲೆಯ ಆರಂಭ; ಮಹಿಳಾ ಹಾಸ್ಟೆಲ್ ಸೌಲಭ್ಯ ಇತ್ಯಾದಿ ಅಂಶಗಳು ಮನವಿಯಲ್ಲಿ ಒಳಗೊಂಡಿದ್ದವು. ಸಮಸ್ಯೆಗಳನ್ನು ಶೀಘ್ರವೇ ಪರಿಶೀಲಿಸಿ, ಈಡೇರಿಸುವ ಭರವಸೆಯನ್ನು ಜಿಲ್ಲಾಧಿಕಾರಿ ನೀಡಿದರು.

●

ರಿಕ್ಷಾ ಚಾಲಕರ ಸಂಘದ ಚುನಾವಣೆ

(6ನೇ ಪುಟದಿಂದ)

ಎನ್. ಉಮೇಶ್ ನೇರಂಬಳ (ಜೊತೆ ಕಾರ್ಯದರ್ಶಿ), ವಿ. ಆನಂದ, ಹರಿದಾಸ್ (ಕೋಶಾಧಿಕಾರಿಗಳು) ಇವರು ಪದಾಧಿಕಾರಿಗಳಾಗಿ ಆಯ್ಕೆ ಗೊಂಡಿರುತ್ತಾರೆ.

ಸಂಘದ ಸದಸ್ಯನಾಗಿದ್ದು, ರಿಕ್ಷಾ ಅಪಘಾತದಲ್ಲಿ ನಷ್ಟ ಹೊಂದಿದ ಚಾಲಕನಿಗೆ ಸಂಘದ ವತಿಯಿಂದ ಕನಿಷ್ಟ 1/3 ಅಂಶ ಹಣ ಸಹಾಯಕೊಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ಸಭೆಯು ಕೊನೆಯಲ್ಲಿ ನೂತನ ಕಾರ್ಯದರ್ಶಿಯಾದ ವಿ. ಗೋಪಾಲ ಬೆಟ್ಟಾಗರ ಇವರು ವಂದಿಸಿದರು

ಬೆಂಗಳೂರು :

ಬಳಕೆದಾರರನ್ನು ವಂಚಿಸುತ್ತಿರುವುದರ ವಿರುದ್ಧ ಪ್ರತಿಭಟನೆ

ದಿನಬಳಕೆಯ ವಸ್ತುಗಳನ್ನು ಸರಿಯಾಗಿ ವಿತರಣೆ ಮಾಡದೆ ವಂಚಿಸುತ್ತಿರುವುದರ ವಿರುದ್ಧ ಸಿ. ಪಿ. ಐ. (ಎಂ) ಶ್ರೀರಾಂಪುರಂ ವಿಭಾಗ ಸಮಿತಿಯ ನೇತೃತ್ವದಲ್ಲಿ ಈ ಪ್ರದೇಶದ 'ಲಕ್ಷ್ಮೀನಾರಾಣಪುರ ಬಳಕೆದಾರರ ಸಹಕಾರಿ ಸಂಘ'ದ ಎದುರು ಮತಪ್ರದರ್ಶನ ನಡೆಸಲಾಯಿತು. ಮತ ಪ್ರದರ್ಶನದ ನೇತೃತ್ವವನ್ನು ಸಮಿತಿಯ ಕಾರ್ಯದರ್ಶಿ ಕಾಂ| ಎ. ವಿ. ರಮೇಶ್ ಮತ್ತು ಕಾಂ| ಮುನಿಸ್ವಾಮಿ ವಹಿಸಿದ್ದರು.

ಕಾರ್ಡುದಾರರಿಗೆ ಸೀಮೆ ಎಣ್ಣೆ, ಅಕ್ಕಿ ಖಾದ್ಯ ತೈಲ ಮುಂತಾದವು ಸರಿಯಾಗಿ ವಿತರಣೆಯಾಗದೆ ಕುರಿತು ಸಹಕಾರಿ ಸಂಘದ ಮ್ಯಾನೇಜರ್ ಮತ್ತು ಗುಮಾಸ್ತರನ್ನು ಪ್ರಶ್ನಿಸಿದಾಗ ಅವರಿಬ್ಬರೂ ಉತ್ತರ ಕೊಡುವ ಬದಲು ಒಳಹೋಗಿ ಅವಿತಿಟ್ಟುಕೊಂಡರು. ಇದು ನೆರೆದಿದ್ದ ಮತಪ್ರರ್ಶಕರನ್ನು ಉದ್ರಿಕ್ತಗೊಳಿಸಿತು. ಸಹಕಾರಿ ಸಂಘದಲ್ಲಿ ನಡೆಯುವ ಮೋಸಗಳನ್ನು ಖಂಡಿಸುವ ಘೋಷಣೆಗಳು ಮೊಳಗಿದವು.

ನೆರೆದಿದ್ದ ಮತಪ್ರದರ್ಶಕರನ್ನುದ್ದೇಶಿಸಿ ಕಾಂ| ರಮೇಶ್ ಮತ್ತು ಮುನಿಸ್ವಾಮಿಯವರು ಮಾತನಾಡುತ್ತಾ, ಬಳಕೆದಾರರು ಒಗ್ಗಟ್ಟಾಗಬೇಕಾದ ಅಗತ್ಯವನ್ನು ಕುರಿತು ಒತ್ತಿ ಹೇಳಿದರು. ಅವರುಗಳು ಮುಂದುವರೆದು, ಕೃತಕ 'ಕೊರತೆ'ಯನ್ನು ಸೃಷ್ಟಿಸುವ, ಅಪಾರ ದಾಸ್ತಾನು ಸಂಗ್ರಹಿಸುವ ವರ್ತಕರನ್ನು ತೀವ್ರವಾಗಿ ಖಂಡಿಸಿದರು ಪಕ್ಷ ನಡೆಸುವ ಜನಪರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಅವರು ಮನವಿ ಮಾಡಿದರು.

ಈ ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ ಸ್ಥಳೀಯ ಸಮಿತಿಯ ಕಾರ್ಯಕರ್ತರೂ ಪಾಲ್ಗೊಂಡಿದ್ದರು

ಯುದ್ಧ ವಿರೋಧಿ ಪ್ರದರ್ಶನಕಾರರ ಮೇಲೆ ಲಾಠೀ ಚಾರ್ಜ್

W.F.T.U.ನ ಕರೆಯ ಮೇಲೆ ಸೆಪ್ಟೆಂಬರ್ 1ರಂದು ಸಿ.ಐ.ಟಿ.ಯು. ಮತ್ತಿತರ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಜಮ್‌ಶೇಡ್‌ಪುರದಲ್ಲಿ ನಡೆದ ಮತಪ್ರದರ್ಶನದ ಸಂದರ್ಭದಲ್ಲಿ ಪೋಲಿಸರು ಅಮಾನುಷ ಲಾಠೀ ಪ್ರಹಾರ ಮಾಡಿರುವ ವರದಿಯಾಗಿದೆ. ಈ ಅಮಾನುಷ ಲಾಠೀ ಪ್ರಹಾರದಿಂದಾಗಿ ನೂರಾರು ಜನ ಕಾರ್ಮಿಕರು ಗಾಯಗೊಂಡಿದ್ದು ಕೆಲವರ ಸ್ಥಿತಿ ಚಿಂತಾಜನಕವಾಗಿದೆ.

ಪೋಲಿಸರ ಈ ಕುಕೃತ್ಯದ ಹಿಂದೆ ಟಾಟಾ ಕಂಪನಿಯವರ ಕೈವಾಡವಿದೆಯೆಂಬುದು ಸ್ಪಷ್ಟವಾಗಿದೆ. ಅವರ ಕೋರಿಕೆಯ ಮೇರೆಗೆ ಪೋಲಿಸರು ಸೆ. 144ರನ್ನು ಜಾರಿ ಮಾಡಿದ್ದಾರೆ.

ಸಿ.ಐ.ಟಿ.ಯು. ಅಧ್ಯಕ್ಷ ಕಾಂ| ಬಿ. ಟಿ. ರಣದಿವೆಯವರು ಈ ಕುರಿತು ಪತ್ರಿಕಾ ಪ್ರಕಟನೆಯೊಂದನ್ನು ಹೊರಡಿಸಿ, ಪೋಲಿಸರ ಅತ್ಯಾಚಾರವನ್ನು ಕಟುವಾಗಿ ಖಂಡಿಸಿದ್ದಾರೆ.

ತಾನು ಯುದ್ಧ ವಿರೋಧಿ ಎಂದು ಹೇಳಿಕೊಳ್ಳುತ್ತಿರುವ ಇಂದಿರಾ ಸರಕಾರ, ಯುದ್ಧ ವಿರೋಧಿ ಪ್ರದರ್ಶನಕಾರರ ಮೇಲೆ ದಾಳಿ ನಡೆಸಿದ ಘಟನೆ ಇಂದಿರಾ ಗಾಂಧಿಯವರ ನೈಜ ಬಣ್ಣವನ್ನು ತೋರಿಸುತ್ತದೆ.

ಬೆಂಗಳೂರು :

ಡಿ.ವೈ.ಎಫ್.ಐ. ಶ್ರೀರಾಂಪುರಂ ಘಟಕದ ಪ್ರಥಮ ಸಮ್ಮೇಳನ

ಅಮೇರಿಕದ ಯುದ್ಧಕೋರ ನೀತಿಯನ್ನು ಪ್ರತಿಭಟಿಸಿ - ಹನ್ನನ್ ಮೊಲ್ಲಾ

ಮಾನವಕುಲವನ್ನು ನಾಶಮಾಡಲು ತವಕಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕುತಂತ್ರಗಳ ವಿರುದ್ಧ ಪ್ರತಿಭಟಿಸಲು ಕಾಂ। ಹನ್ನನ್‌ಮೊಲ್ಲಾ ಕರೆ ನೀಡಿದರು. ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕಾಂ। ಹನ್ನನ್ ಮೊಲ್ಲಾ (ಎಂ.ಪಿ.) ಸೆಪ್ಟೆಂಬರ್ 12 ರಂದು ಬೆಂಗಳೂರಿನ ಶ್ರೀರಾಂಪುರಂ ಘಟಕದ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ। ಜಿ. ವಿ. ಶ್ರೀರಾಮರೆಡ್ಡಿಯವರು ಧ್ವಜಾರೋಹಣ ಮಾಡಿದರು.

ಕಾಂ। ಹನ್ನನ್ ಅವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಾ ಯುವಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ವಿರುದ್ಧ ಅವಿರತ ಹೋರಾಟ ಅತ್ಯವಶ್ಯ ಎಂದರು. ನಿರುದ್ಯೋಗ, ಅನಕ್ಷರತೆ, ವರದಕ್ಷಿಣೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಧ್ವನಿಯೆತ್ತಲು ಯುವಜನರನ್ನು ಸಂಘಟಿಸಬೇಕೆಂದು ಕಾಂ। ಹನ್ನನ್ ತಿಳಿಸಿದರು. ಅಮೇರಿಕನ್ ಸಾಮ್ರಾಜ್ಯಶಾಹಿಗಳ ದುಷ್ಟ ಪ್ರಯತ್ನಗಳ ಕುರಿತು ಜನತೆಗೆ ಮನದಟ್ಟು ಮಾಡಲು ಶ್ರಮಿಸಬೇಕೆಂದು ಹೇಳಿದ ಕಾಂ। ಹನ್ನನ್, ಅಕ್ಟೋಬರ್ 4 ರಂದು ದೆಹಲಿಯಲ್ಲಿ ನಡೆಯಲಿರುವ 'ಶಾಂತಿ ರ್‍ಯಾಲಿ'ಯನ್ನು ಯಶಸ್ವಿಮಾಡಬೇಕೆಂದು ಮನವಿ ಮಾಡಿದರು.

ಶ್ರೀರಾಂಪುರಂ ಘಟಕದ ಸಂಚಾಲಕ ಕಾಂ। ಎನ್. ಚಲುವರಾಜ್ ಅವರು ಸಮ್ಮೇಳನಕ್ಕೆ ಆಗಮಿಸಿದ್ದ 150 ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಮ್ಮೇಳನಕ್ಕೆ ಅತಿಥಿಗಳಾಗಿ ಬಂದಿದ್ದ ಎಸ್. ಎಫ್. ಐ. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ। ಆರ್. ಜಯಕುಮಾರ್, ಡಿ. ವೈ. ಎಫ್. ಐ. ಮುಖಂಡರುಗಳಾದ ಕಾಂ। ಮೋಹನ್‌ಕುಮಾರ್ (ಮೈಸೂರು), ಎಸ್. ಶಿವರಾಂ (ಬೆಂಗಳೂರು), ಸತ್ಯನಾರಾಯಣ (ಕೋಲಾರ) ಅವರುಗಳು ಸಮ್ಮೇಳನಕ್ಕೆ ಶುಭ ಕೋರಿದರು.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರೋಧಿಸುವ, ಬಿಹಾರದ ಪತ್ರಿಕಾ ಮಸೂದೆಯನ್ನು ಖಂಡಿಸುವ, ಮುಂಬೈನ ಹತ್ತಿ ಗಿರಣಿ ಕಾರ್ಮಿಕರ ಮತ್ತು ಪೋಲಿಸರ ಹೋರಾಟಗಳನ್ನು ಬೆಂಬಲಿಸುವ ಈ ಮುಂತಾದ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

7 ಜನ ಪದಾಧಿಕಾರಿಗಳುಳ್ಳ 20 ಜನರ ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಚಂದ್ರು, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಮತ್ತು ರವಿ, ಕಾರ್ಯದರ್ಶಿಯಾಗಿ ಎನ್. ಚಲುವರಾಜ್, ಸಹ ಕಾರ್ಯದರ್ಶಿಗಳಾಗಿ ಕೃಷ್ಣಮೂರ್ತಿ ಮತ್ತು ಗುರುಸ್ವಾಮಿ ಮತ್ತು ಖಜಾಂಚಿಯಾಗಿ ರಂಗಸ್ವಾಮಿ ಆಯ್ಕೆಯಾಗಿದ್ದಾರೆ.

ಸಾಯಂಕಾಲ ಸಮ್ಮೇಳನದ ಅಂಗವಾಗಿ ಮೆರವಣಿಗೆ ಬಹಿರಂಗ ಸಭೆ ನಡೆದವು. ಧ್ವನಿವರ್ಧಕವನ್ನು ಕಿತ್ತುಕೊಂಡು ಸಭೆ ನಡೆಯದಂತೆ ಮಾಡಲು ಯತ್ನಿಸಿದ ಪೋಲಿಸರ ಪ್ರಯತ್ನವನ್ನು ವಿಫಲಗೊಳಿಸಲಾಯಿತು.

ಸಭೆಯನ್ನುದ್ದೇಶಿಸಿ ಕಾಂ। ಜಯಕುಮಾರ್, ಎಸ್. ಶಿವರಾಂ, ಎನ್. ರಾಜಣ್ಣ ಮತ್ತು ಕಾಂ। ಮೋಹನ್ ಕುಮಾರ್ ಮಾತನಾಡಿದರು.

●

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಮಾವೇಶ

ಸರ್ಕಾರದ ವೇತನ ಸ್ಥಂಭನ ನೀತಿಯ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟಕ್ಕೆ ಸಿದ್ಧತೆ ನಡೆಸಲು ಅಕ್ಟೋಬರ್ 12, 13 ರಂದು ಹೈದರಾಬಾದಿನಲ್ಲಿ ಸಾರ್ವಜನಿಕ ಉದ್ದಿಮೆ ಕಾರ್ಮಿಕರ ಅಖಿಲ ಭಾರತ ಮಟ್ಟದ ಸಮಾವೇಶವೊಂದನ್ನು ನಡೆಸಲು ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಪ್ರಚಾರ ಸಮಿತಿಯು (ಎನ್. ಸಿ. ಸಿ.) ತೀರ್ಮಾನಿಸಿದೆ. ಆಗಸ್ಟ್ 24 ರಂದು ಕಾಂ। ಸಮರ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಎನ್.ಸಿ.ಸಿ. ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು.

ರಾಷ್ಟ್ರೀಯ ಆಂದೋಲನ ಸಮಿತಿಯ ಪರಿಶ್ರಮದಿಂದ ಈಗಾಗಲೇ ಬಿ.ಎಚ್.ಇ.ಎಲ್., ಉಕ್ಕು ಮತ್ತು ಕಲ್ಲಿದ್ದಲು ಕೈಗಾರಿಕೆಗಳಲ್ಲಿನ ಕಾರ್ಮಿಕರ ಸಮಾವೇಶಗಳು ಯಶಸ್ವಿಯಾಗಿ ಜರುಗಿದ್ದು ಕೈಗಾರಿಕಾವಾರು ಜಂಟಿ ಹೋರಾಟಗಳಿಗೆ ಕಾರ್ಯಕ್ರಮ ರೂಪಿಸಲಾಗಿದೆ. ಅಖಿಲ ಭಾರತ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಮಾವೇಶದಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಸಂಘಗಳೂ ಭಾಗವಹಿಸುತ್ತವೆ. ಸಾರ್ವಜನಿಕೋದ್ಯಮದ ಬ್ಯೂರೋ ನೀಡಿರುವ ನಿರ್ದೇಶನದ ಪರಿಣಾಮವಾಗಿ ಹಲವಾರು ಉದ್ದಿಮೆಗಳಲ್ಲಿ ವೇತನ ಸಂಧಾನದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಕುರಿತು ಈ ಸಮಾವೇಶದಲ್ಲಿ ವಿಮರ್ಶಿಸಲಾಗುವುದು. ○

ಬಂದೂಕುಗಳನ್ನು ಎತ್ತಿಹಿಡಿಯುತ್ತೇವೆ

(1ನೇ ಪುಟದಿಂದ)

ಕರು ಹಾನಿಗೀಡಾಗಿದ್ದಾರೆ ಎಂದು ಅವರು ತಿಳಿಸಿದರು.

"ಜನರನ್ನು ನಾಶಮಾಡಿ 'ಆಸ್ತಿಪಾಸ್ತಿ ಉಳಿಸು'ವಂತ ಹೊಸ ಅಸ್ತ್ರಗಳ ಬಳಕೆಗೆ ಪ್ರಯೋಗ ಕ್ಷೇತ್ರ"ವಾಗಿ ಲೆಬನಾನನ್ನು ಬಳಸಲಾಯ್ತು ಎಂದು ಅವರು ಹೇಳಿದರು. ಮಾನವನ ಮೂಲಭೂತ ಹಕ್ಕುಗಳನ್ನು ಇಸ್ರೇಲ್ ಉಲ್ಲಂಘಿಸಿದೆಯೆಂದು ಅವರು ಆಪಾದಿಸಿದರು. ಈ ರೀತಿ ಇದನ್ನು ಮುಂದುವರಿಯಬಿಟ್ಟಲ್ಲಿ ಮುಂದೆ ಅನೇಕ ದೇಶಗಳು ಈ ಮಾರಕ ಅಸ್ತ್ರಗಳಿಗೆ ಬಲಿಯಾಗಬೇಕಾದೀತು ಎಂದು ಎಚ್ಚರಿಸಿದರು.

ಆಗಸ್ಟ್ 15, 16 ರಂದು ನಿಕೋಸಿಯಾದಲ್ಲಿ 24 ಸದಸ್ಯರ ಆಯೋಗ ತನಿಖೆ ನಡೆಸಿತು. ಅದರ ಪ್ರಕಾರ 600,000 ಲೆಬನಾನ್ ಜನ ವಸತಿಹೀನರಾಗಿದ್ದಾರೆ. 300,000 ಲೆಬನಾನ್‌ರಿಗೆ ಮತ್ತು ಕಡಿಮೆ ಪಕ್ಷ 83,000 ಪ್ಯಾಲೆಸ್ತೀನರಿಗೆ ತತ್‌ಕ್ಷಣದ ನೆರವು ಬೇಕಾಗಿದೆ. ಇಸ್ರೇಲಿ ಆಕ್ರಮಣ ಕೃತ್ಯದಲ್ಲಿ ಅಮೇರಿಕ ಸಕ್ರಿಯ ಪಾಲುದಾರನಾಗಿತ್ತೆಂದು ಆಯೋಗವು ಆಪಾದಿಸಿದೆ, ರೆಡ್‌ಕ್ರಾಸ್ ರಕ್ಷಿತ ಪ್ರದೇಶದ ಮೇಲೂ ಇಸ್ರೇಲ್ ಧಾಳಿ ನಡೆಸಿದೆಯೆಂದು ಆಪಾದಿಸಲಾಗಿದೆ.

ಅಮೇರಿಕ ಬೆಂಬಲಿತ ಜಿಯೋನ್‌ವಾದಿ ಆಕ್ರಮಣಗಳಿಂದ ಪ್ಯಾಲೇಸ್ತೀನಿಯರ ಸ್ಥೈರ್ಯ ಒಂಚೂರು ಕುಂದಿಲ್ಲ. ಜೋರ್ಡಾನ್‌ನಲ್ಲಿ ಬಂದಿಳಿದಾಗ ಒಬ್ಬ ಯುವಕ ಯೋಧ ನುಡಿದ—"ಲೆಬನಾನ್‌ನ ಮಕ್ಕಳು ಮತ್ತು ಹೆಂಗಸರಿಲ್ಲದೆ ಇದ್ದಲ್ಲಿ ನಾವಿಂದು ಹೋರಾಟದ ಕಣ (ಲೆಬನಾನ್)ದಲ್ಲೆ ಇರುತ್ತಿದ್ದೆವು."

ಸಂಪಾದಕೀಯ

(1ನೇ ಪುಟದಿಂದ)

ಇದರಿಂದಾಗಿಯೇ ಲೆಬನಾನ್ ಸಂಸತ್ತಿನಲ್ಲಿ ಅಧ್ಯಕ್ಷರ ಆಯ್ಕೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿತ್ತು ಮತ್ತು ಸಂಸತ್ತಿನ ಮುಸ್ಲಿಂ ಸದಸ್ಯರು ಅಧ್ಯಕ್ಷರ ಚುನಾವಣೆಯನ್ನು ಬಹಿಷ್ಕರಿಸಿರುತ್ತಾರೆ.

ಲೆಬನಾನ್‌ನಲ್ಲಿ ಶಾಂತಿಯಿರಬೇಕಾದರೆ ಫಲಾಂಗಿಸ್ಟ್ ಪಕ್ಷದ ಈಗಿನ ನಾಯಕತ್ವದಿಂದ ಸಾಧ್ಯವಿಲ್ಲ. ವಿದೇಶಿಯರ, ಅದರಲ್ಲೂ ಇಸ್ರೇಲ್‌ನ ಪರವಾಗಿದ್ದು ಅವರ ಪಿತೂರಿಗಳಿಗೆ ಬೆಂಬಲ ನೀಡುವ ನಾಯಕತ್ವದಿಂದ ಸಾಧ್ಯವಾಗಲಾರದು. ಪ್ಯಾಲೆಸ್ಟೈನ್ ವಿಮೋಚನಾ ಯೋಧರ ಹೋರಾಟ, ತ್ಯಾಗ ಮತ್ತು ಬಲಿದಾನ ಎಂದೂ ವ್ಯರ್ಥವಾಗಲಾರದು. ಅವರೀಗ ಪಶ್ಚಿಮ ಬೈರೂತ್‌ನಿಂದ ಬೇರೆ ಕಡೆಗೆ ಹೋಗಿರಬಹುದು. ಆದರೆ ಅವರ ಬೇಡಿಕೆ ನ್ಯಾಯವಾಗಿದೆ. ಅವರೆಂದೂ ನಿರಾಶ್ರಿತರಾಗಿರಲು ಸಾಧ್ಯವಿಲ್ಲ. ಅವರದೇ ಆದ ದೇಶ ಅಸ್ತಿತ್ವದಲ್ಲಿ ಬಂದೇ ಬರುತ್ತದೆ. ಸಾಮ್ರಾಜ್ಯಶಾಹಿಗಳ ಪಿತೂರಿಯಿಂದಲೂ, ಪಾಳೆಯಗಾರಿ ಅರಬ್ ರಾಷ್ಟ್ರಗಳ ದ್ರೋಹದಿಂದಲೂ ಪ್ಯಾಲೆಸ್ಟೇನಿಯನ್ ಯೋಧರು ತಾತ್ಕಾಲಿಕವಾಗಿ ಹಿಮ್ಮೆಟ್ಟಬೇಕಾಗಿ ಬಂದಿರುವುದು ನಿಜ ಆದರೆ ಅವರ ಬೇಡಿಕೆಯಾದ ಸ್ವತಂತ್ರ ಪ್ಯಾಲೆಸ್ಟೈನ್ ರಾಷ್ಟ್ರ ರಚನೆಯಾಗುವತನಕ ಅವರ ಹೋರಾಟ ಮುಂದುವರಿಯುವುದು ಖಂಡಿತ. ಈ ಹೋರಾಟಕ್ಕೆ ಬೆಂಬಲ ನೀಡುವ ಹೊಸ ಅಧ್ಯಕ್ಷರು ಲೆಬನಾನ್‌ನಲ್ಲಿ ಆಯ್ಕೆಯಾಗಲೆಂದು ನಮ್ಮ ಹಾರೈಕೆ.

ಬೆಂಗಳೂರು :

ಎನ್.ಎಂ.ಆರ್. (ಪಿ.ಡಬ್ಲ್ಯೂ.ಡಿ.) ಕಾರ್ಮಿಕರ ಧರಣಿ

ಕನಿಷ್ಠ ಕೂಲಿ ಜಾರಿಗೊಳಿಸಬೇಕು; 240 ದಿನ ಕೆಲಸ ಮಾಡಿರುವ ಕಾರ್ಮಿಕರನ್ನು ಖಾಯಂಗೊಳಿಸಬೇಕು; ಕೆಲಸ ಮಾಡಿದ್ದಕ್ಕೆ ದಾಖಲೆ ಇಡಬೇಕು; ಅಪಘಾತ ಸಂಭವಿಸಿದರೆ ಕಾನೂನು ರೀತ್ಯ ಪರಿಹಾರ ಕೊಡಬೇಕು; ಎಂಟು ಘಂಟೆಗಿಂತ ಹೆಚ್ಚು ಕೆಲಸ ಮಾಡಿಸಿದರೆ ಹೆಚ್ಚು ಕೂಲಿಕೊಡಬೇಕು... ಇತ್ಯಾದಿ ಬೇಡಿಕೆಗಳಿಗಾಗಿ ಒತ್ತಾಯಿಸಿ ಸೆಪ್ಟೆಂಬರ್ 15 ರಂದು ವಿಧಾನ ಸೌಧದೆದುರು ಎನ್.ಎಂ.ಆರ್. ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸಿದರು.

ಕೆಲವೇ ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದ ಈ ಸಂಘಟನೆ ಅನೇಕ ವರ್ಷಗಳಿಂದ ಇಲಾಖೆಯಲ್ಲಿ ದುಡಿದು ಹಣ್ಣಾಗಿದ್ದ ಮೂಕ ಜೀವಗಳಿಗೆ ಆಶಾಕಿರಣವಾಗಿದೆ; ತಮ್ಮನ್ನು ಬತ್ತಲೆಗೊಳಿಸುತ್ತಿರುವ ಸರಕಾರದ ವಿರುದ್ಧ ಸೊಲ್ಲೆತ್ತಲು ಆಯುಧವಾಗಿದೆ.

ಸ್ವಾತಂತ್ರ್ಯ ಬರುವ ಮುಂದಿನಿಂದಲೂ ಕೆಲಸ ಮಾಡಿಕೊಂಡಿರುವ ವ್ಯಕ್ತಿಗಳುಂಟು ಈ ಇಲಾಖೆಯಲ್ಲಿ. ದುಡಿದೂ, ದುಡಿದೂ ಮುಪ್ಪಾದ ಮೇಲೆ ಯಾವುದೇ ನಿವೃತ್ತಿ ವೇತನ, ಪರಿಹಾರಗಳಿಲ್ಲದೇ ಮನೆಗೆ ತೆರಳುವ ಪರಿಸ್ಥಿತಿ. ಹೋಗಲಿ ! ಕೆಲಸಮಾಡುತ್ತಿರುವುದಕ್ಕೂ ಸಮರ್ಪಕ ದಾಖಲೆಗಳಿಲ್ಲ. ಅಧಿಕಾರಿಗಳ ಮನ ಬಂದಾಗ ಈ ಬಡಪಾಯಿಗಳಿಗೆ ಸಂಬಳ. ಇಲ್ಲಿ ನಡೆಯುತ್ತಿರುವ ಅನ್ಯಾಯಗಳ ಸರಮಾಲೆಗಳ ಪಟ್ಟಿ ಮಾಡಿದರೆ ತುಂಬ ಉದ್ದವಾಗುತ್ತದೆ.

ಸಿ. ಐ. ಟಿ. ಯು.ಗೆ ಸಂಯೋಜಿತವಾಗಿರುವ ಎನ್. ಎಂ. ಆರ್. (ಪಿ. ಡಬ್ಲ್ಯೂ. ಡಿ.) ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ। ಸೂರ್ಯನಾರಾಯಣ ರಾವ್ ಮತ್ತು ಕಾರ್ಯದರ್ಶಿ ಕಾಂ। ಆರ್. ಶ್ರೀನಿವಾಸ್ ಇವರ ನೇತೃತ್ವದಲ್ಲಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಎಲ್ಲೆಡೆಗಳಿಂದ ಆಗಮಿಸಿದ ಸುಮಾರು 800 ಕಾರ್ಮಿಕರು ಪಾಲ್ಗೊಂಡಿದ್ದರು.

ಕಾರ್ಮಿಕ ಪ್ರತಿನಿಧಿಗಳು ಕಾಂ। ಸೂರಿ ಮತ್ತು ಶ್ರೀನಿವಾಸ್ ಇವರ ನೇತೃತ್ವದಲ್ಲಿ ಲೇಬರ್ ಕಮೀಷನರ್ ಅವರಲ್ಲಿ ತೆರಳಿ ಕೆಲವು ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿದರು.

ಇದೀಗ ಚಿಗುರುತ್ತಿರುವ ಸಂಘಟನೆ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಹಸ್ರಾರು ಕಾರ್ಮಿಕರ ಬವಣೆ ನೀಗಲು ಶ್ರಮಿಸಲಿ; ಬೆಳೆದು ಹೆಮ್ಮರವಾಗಲಿ; ತಮ್ಮ ಮೇಲೆ ನಡೆಯುತ್ತಿರುವ ಕ್ರೂರ ಶೋಷಣೆಯ ವಿರುದ್ಧ ಕಾರ್ಮಿಕ ಸಿಡಿದೇಳಲಿ ಎಂದು ಐಕ್ಯರಂಗ ಆಶಿಸುತ್ತದೆ.

ಅಸ್ಸಾಂ

(5ನೇ ಪುಟದಿಂದ)

ಗೋಪಾಲಪುರದಲ್ಲಿ ಅಂದು (ಆಗಸ್ಟ್ 15) ಸಿ.ಪಿ.ಐ (ಎಂ) ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡ ಎಲ್ಲರನ್ನೂ ಇಲ್ಲಿಯ ಪೋಲಿಸ್ ಅಧಿಕಾರಿ ಬಂಧನಕ್ಕೊಳಪಡಿಸಿದನು.

ಕೇವಲ ಸರಕಾರಿ ಆಡಳಿತ ಯಂತ್ರವನ್ನು ನಂಬಿಕೊಂಡು ವಿಚ್ಛಿದ್ರಕಾರಿ ಆಂದೋಲನ ಎದುರಿಸುವುದು ಮೂರ್ಖತನವೆಂಬುದು ಈ ಘಟನೆಗಳು ಸ್ಪಷ್ಟಪಡಿಸುತ್ತವೆ. ರಾಷ್ಟ್ರದ ಐಕ್ಯತೆಗೆ ಮಾರಕವಾಗಿರುವ ಚಳುವಳಿಯ ಗಂಡಾಂತರದ ಕುರಿತು ಜನತೆಗೆ ಮನದಟ್ಟು ಮಾಡಲಿಲ್ಲ. ಒಂದು ಸರ್ವಸಮ್ಮತ ಪರಿಹಾರ ರೂಪಿಸಲು ರಾಜ್ಯದ ಎಲ್ಲಾ ಜನಪರ ಶಕ್ತಿಗಳು ಪ್ರಯತ್ನಿಸಿದಾಗ ಮಾತ್ರ ಯಶ ಕಾಣಬಹುದು.

○

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Raves Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.